ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 11
Issue - 11
Pages - 20
₹ - 12
November- 2013

## ಕನ್ನಡ ನಾಡಿನ ಸಿರಿ ಬೆಳಗಿದ ರಾಜ ಮನೆತನಗಳು


ಕದಂಬ


ಗಂಗ


ರಾಷ್ಟ್ರಕೂಟ


ಚಾಲುಕ್ಯ

ತೈಲಪ ಹೊಯ್ಸಳರಾಳಿದ ನಾಡೇ, ಡಂಕಣ ಜಕಣರ ನಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗ, ಕಾವೇರಿಯ ವರ ರಂಗ
ಚೈತನ್ಯ ಪರಮಹಂಸ ವಿವೇಕರ, ಭಾರತ ಜನನಿಯ ತನುಜಾತೆ !


ಕಳಚೂರಿ


ಹೊಯ್ಸಳ



ಶಾತವಾಹನ


ವಿಜಯನಗರ


ಮೈಸೂರು

ಸಹಕಾರಂ ಗೆಲ್ಲೆ...  ಸಹಕಾರಂ ಬಾಳ್ಗೆ...

ರಾಜ್ಯದ ಸಮಸ್ತ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವದ,
ದೀಪಾವಳಿಯ ಹಾಗೂ 60ನೇ ಸಹಕಾರ ಸಪ್ತಾಹದ ಹಾರ್ದಿಕ ಶುಭಾಷಯಗಳು
ಅಧ್ಯಕ್ಷರು, ಉಪಾಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸದಸ್ಯರು.



ಸೌಹಾರ್ದ ಸಹಕಾರಿಗಳ ಸಂಖ್ಯೆ : 2586 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 531



ಅಧ್ಯಕ್ಷರ ಮಾತು

> ನಿರುದ್ಯೋಗ ನಿವಾರಣೆಗಾಗಿ, ಆಹಾರ ಉತ್ಪಾದನೆಗಾಗಿ, ಕೃಷಿಗೆ ಪೂರಕ ಉದ್ಯಮಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಮೀನುಗಾರಿಕೆ, ಸಣ್ಣ ಹಾಗೂ ಬೃಹತ ಉದ್ದಿಮೆಗಳು, ರೇಷ್ಮೆ ಕೈಗಾರಿಕೆ, ಗುಡಿ ಕೈಗಾರಿಕೆ, ವಸತಿ ವ್ಯವಸ್ಥೆ, ಗ್ರಾಹಕ, ಮಾರಾಟ ಹಾಗೂ ಸಂಸ್ಕರಣ ಚಟುವಟಿಕೆಗಳು, ಸಾರಿಗೆ, ಪ್ರವಾಸೋದ್ಯಮ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಪ್ರಕಟಣೆಗಳು, ಮುದ್ರಣ, ಆಧುನಿಕ ಮಾಹಿತಿ ತಂತ್ರಜ್ಞಾನ, ಪತ್ರಿಕೋದ್ಯಮ ಜಾಹೀರಾತು, ಸೇವಾ ಕ್ಷೇತ್ರಗಳು ಹೀಗೆ ಪ್ರತಿಯೊಂದು ಸ್ತರಗಳಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಅಗತ್ಯ ಇದೆ.

# ಸಮಗ್ರ ಅಭಿವೃದ್ಧಿಗಾಗಿ ಸಹಕಾರ ಕ್ಷೇತ್ರ

ನಾಡಿನ ಸಮಸ್ತ ಸಹಕಾರಿಗಳಿಗೆ ದೀಪಾವಳಿಯ ಹಾಗೂ 60ನೇ ಅಖಿಲಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು. ದೀಪದಿಂದ ದೀಪ ಬೆಳಗಿಸುವುದರೊಂದಿಗೆ ನಮ್ಮಲ್ಲಿರುವ ಅಜ್ಞಾನವನ್ನು ತೊಲಗಿಸಿ ಜ್ಞಾನದ ಬೆಳಕಿನಲ್ಲಿ ನಮ್ಮ ಉಜ್ವಲ ಭವಿಷ್ಯದ ಜೀವನವನ್ನು ಸಾಗಿಸಬೇಕೆಂಬ ಉದಾತ್ತ ಧ್ಯೇಯವನ್ನು ಸಾರುವ ದೀಪಾವಳಿ, ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಉತ್ಸಾಹವನ್ನು ತುಂಬಲಿ, ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ದಿನೇ ದಿನೇ ಪ್ರವರ್ಧಮಾನದತ್ತ ಸಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಪ್ರತಿ ವರ್ಷ ನವೆಂಬರ 14 ರಿಂದ 20ರವರೆಗೆ ದೇಶದಾದ್ಯಂತ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ನೀಡುವ ಘೋಶವಾಕ್ಯವನ್ನು ಧ್ಯೇಯವನ್ನಾಗಿಸಿಕೊಂಡು ರಾಷ್ಟ್ರೀಯ ಸಹಕಾರಿ ಯೂನಿಯನ್ ನವರು ನೀಡುವ ಮಾರ್ಗದರ್ಶನದೊಂದಿಗೆ ಸಹಕಾರಿ ಸಪ್ತಾಹವನ್ನು ಆಚರಿಸಲಾಗುತ್ತದೆ. ಇದು 60ನೇ ಸಹಕಾರಿ ಸಪ್ತಾಹ. "ಬದಲಾದ ಸಮಯದಲ್ಲಿ ಆರ್ಥಿಕ-ಸಾಮಾಜಿಕ ಪುನರುತ್ಥಾನಕ್ಕೆ ಸಹಕಾರ ಸಂಸ್ಥೆಗಳು" ಎಂಬುದು ಈ ಬಾರಿಯ ಸಪ್ತಾಹದ ಧ್ಯೇಯ.


ಸಹಕಾರಿ ಸಪ್ತಾಹದ ಅವಧಿಯಲ್ಲಿ ದೇಶದ ಸಹಕಾರಿ ಚಳುವಳಿಯ ಧ್ಯೇಯ ಧೋರಣೆಗಳ ಬಗ್ಗೆ, ನಡೆದು ಬಂದ ದಾರಿ, ಸಾಧನೆಗಳು, ಸವಾಲುಗಳ ಬಗ್ಗೆ ಹಾಗೂ ಅವಕಾಶಗಳ ಬಗ್ಗೆ ವಿಚಾರ ವಿಮರ್ಶೆಗಳು ನಡೆಯುತ್ತ ಬಂದಿವೆ. ಈ ವರ್ಷವೂ ನಡೆಯಬೇಕು. ಈ ವಿಚಾರ ವಿಮರ್ಶೆಗಳು – ಸಹಕಾರ ಕ್ಷೇತ್ರ ಈ ದೇಶದ ಸಮಗ್ರ ಅಭಿವೃದ್ಧಿಗಾಗಿ ಎಂಬುದನ್ನು ಗಮನದಲ್ಲಿಡುವುದು ಅತ್ಯಂತ ಮಹತ್ವದ ವಿಷಯವಾಗಬೇಕು. ಈ ದೇಶದ ಸಹಕಾರ ಚಳುವಳಿಗೆ 109 ವರ್ಷಗಳ ಇತಿಹಾಸವಿದೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ಸಹಕಾರ ಕ್ಷೇತ್ರ ನಿರ್ವಹಿಸುತ್ತಿದೆ. ಈ ದೇಶದ ಸಹಕಾರ ಕ್ಷೇತ್ರದ ಸಾಧನೆ ಅಂತರರಾಷ್ಟ್ರ ಮಟ್ಟದಲ್ಲಿ ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಶಕ್ತಿಯನ್ನು ಗುರುತಿಸಿದ ವಿಶ್ವ ಸಂಸ್ಥೆಯವರು 2012ನ್ನು ಅಂತರರಾಷ್ಟ್ರೀಯ ಸಹಕಾರಿಗಳ ವರ್ಷವನ್ನಾಗಿ ಘೋಶಿಸಿದ್ದರು. ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಮತ್ತು ಸಹಕಾರಿ ಸಂಸ್ಥೆಗಳು ದೇಶದ ಸಂಕಷ್ಟ ಪರಿಸ್ಥಿತಿಗಳಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದಾಗಿ ಹೇಳಿ ಈ ಸಹಕಾರ ಕ್ಷೇತ್ರವನ್ನು ಬಲಪಡಿಸಲು ಸಹಕಾರಿಗಳಿಗೆ ನೀಡಿದ ಕರೆಯನ್ನು ಸಹಕಾರಿಗಳು ಗಮನಿಸಬೇಕು.

ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದು ಬಂದಿರುವ ಈ ಕ್ಷೇತ್ರ ಕೇವಲ ಸಾಂಪ್ರದಾಯಿಕ ಲೇವಾದೇವಿ ಸಂಸ್ಥೆಯಾಗಿ, ಕಾರ್ಯವ್ಯಾಪ್ತಿ ಯಾವುದೇ ಒಂದು ವಿಷಯಕ್ಕೆ ಸೀಮಿತವಾಗದೇ ಸದಸ್ಯರ ಸಮಗ್ರ ಅಭಿವೃದ್ಧಿಯ ಕೇಂದ್ರವಾಗಬೇಕು. ಹಾಗಾದಾಗ ಮಾತ್ರ ಮಹಾತ್ಮಾ ಗಾಂಧೀಜಿಯವರು ಕಂಡ ಆರ್ಥಿಕ ಅಭಿವೃದ್ಧಿಯ ಕನಸು ನನಸಾಗುತ್ತದೆ. 1947ರಲ್ಲಿ ದೇಶಕ್ಕೆ ಸ್ವಾತಂತ್ರ ಬಂದಾಗ ಗಾಂಧೀಜಿ ಹೇಳಿದ ಮಾತು – 'ನಮಗೆ ರಾಜಕೀಯ ಸ್ವಾತಂತ್ರ ಬಂದಿದೆ, ಆದರೆ ಆರ್ಥಿಕ ಸ್ವಾತಂತ್ರಕ್ಕಾಗಿ ಸಹಕಾರ ಕ್ಷೇತ್ರವನ್ನು ಬಲಪಡಿಸಬೇಕು'. ದೇಶದ ಜನರ ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹೀಗೆ ಸಮಸ್ತ ಬೇಕು ಬೇಡಿಕೆಗಳನ್ನು ಪೂರೈಸುವ ಕೇಂದ್ರ ಈ ಸಹಕಾರಿ ವ್ಯವಸ್ಥೆ. ಆದ್ದರಿಂದ ಇದನ್ನು ಬಲಪಡಿಸಬೇಕು. ನಿರುದ್ಯೋಗ ನಿವಾರಣೆಗಾಗಿ, ಆಹಾರ ಉತ್ಪಾದನೆಗಾಗಿ, ಕೃಷಿಗೆ ಪೂರಕ ಉದ್ಯಮಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಮೀನುಗಾರಿಕೆ, ಸಣ್ಣ ಹಾಗೂ ಬೃಹತ ಉದ್ದಿಮೆಗಳು, ರೇಷ್ಮೆ ಕೈಗಾರಿಕೆ, ಗುಡಿ ಕೈಗಾರಿಕೆ, ವಸತಿ ವ್ಯವಸ್ಥೆ, ಗ್ರಾಹಕ, ಮಾರಾಟ ಹಾಗೂ ಸಂಸ್ಕರಣ ಚಟುವಟಿಕೆಗಳು, ಸಾರಿಗೆ, ಪ್ರವಾಸೋದ್ಯಮ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಪ್ರಕಟಣೆಗಳು, ಮುದ್ರಣ, ಆಧುನಿಕ ಮಾಹಿತಿ ತಂತ್ರಜ್ಞಾನ, ಪತ್ರಿಕೋದ್ಯಮ ಜಾಹೀರಾತು, ಸೇವಾ ಕ್ಷೇತ್ರಗಳು ಹೀಗೆ ಪ್ರತಿಯೊಂದು ಸ್ತರಗಳಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಅಗತ್ಯ ಇದೆ.

**ಬಂಧುಗಳೇ,** ಸಹಕಾರ ಸಂಸ್ಥೆಗಳು ಬಡವರ, ದೀನ ದಲಿತರ ಸಮಗ್ರ ಅಭಿವೃದ್ಧಿಯ ಸಾಧನವೇ ಹೊರತು ಶ್ರೀಮಂತರ ಆಯುಧವಾಗಬಾರದು ಸಹಕಾರ ಕ್ಷೇತ್ರ ದೇಶದ ಅಭಿವೃದ್ಧಿಯ ಪ್ರಮುಖ ವ್ಯವಸ್ಥೆಯಾಗಬೇಕು. ಈ ನಿಟ್ಟಿನಲ್ಲಿ ನಾವು ನೀವೆಲ್ಲ ಕಾರ್ಯನಿರ್ವಹಿಸುವ ಅಗತ್ಯವಿದೆ. ನಮ್ಮ ನಮ್ಮ ಸಹಕಾರಿಗಳು ಸದಸ್ಯರ ಸರ್ವತೋಮುಖ ಅಭಿವೃದ್ಧಿಗೆ ಗಮನಹರಿಸಿದಾಗ ಸಮಗ್ರ ಅಭಿವೃದ್ಧಿ ಸಾಧ್ಯ. ಆದ್ದರಿಂದ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳೋಣ. ಸಮಗ್ರ ಅಭಿವೃದ್ಧಿಗೆ ಸಹಕಾರವೇ ಮಹತ್ವದ ಸಾಧನವೆಂದು ಸಾರೋಣ – ಜೈ ಸಹಕಾರ

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಂಪಾದಕೀಯ



## ಕ್ರಿಯಾ ಯೋಜನೆಯ ಅನುಷ್ಠಾನ

2012–13ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಗಳು ಮುಕ್ತಾಯವಾಗಿವೆ. ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ವಿವರಗಳನ್ನು ಸಲ್ಲಿಸಿಯಾಗಿದೆ. ಈಗ ವಾರ್ಷಿಕ ಕ್ರಿಯಾ ಯೋಜನೆಯ ಅನುಷ್ಠಾನದ ಸಮಯ.

ಪ್ರತಿಯೊಂದು ಸಹಕಾರಿಯು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತನ್ನ ಮುಂಬರುವ ವರ್ಷಗಳ ಕಾರ್ಯಚಟುವಟಿಕೆಗಳ ಬಗ್ಗೆ ಒಂದು ಕ್ರಿಯಾಯೋಜನೆಯನ್ನು ಮಂಡಿಸಿ ಸಾಮಾನ್ಯ ಸಭೆಯ ಅನುಮೋದನೆಯನ್ನು ಪಡೆದಿರುತ್ತದೆ. ಈ ಕ್ರಿಯಾಯೋಜನೆ ಜಾರಿ ತರುವಾಗ ಆಯಾ ಸಹಕಾರಿಯ ವ್ಯಾಪ್ತಿಗನುಸಾರವಾಗಿ, ಲಭ್ಯವಿರುವ ಹಾಗೂ ಲಭ್ಯವಾಗಬಹುದಾದ ಸಂಪನ್ಮೂಲಗಳ ಕ್ರೋಢೀಕರಣದ ಆಧಾರದ ಮೇಲೆ, ಹಾಲಿ ಇರುವ ಕಾರ್ಯಚಟುವಟಿಕೆಗಳನ್ನುವಿಸ್ತರಿಸುವುದಾಗಲಿ ಹೊಸದಾಗಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದಾಗಲಿ, ಅದಕ್ಕೆ ಲಭ್ಯವಿರುವ ಸಿಬ್ಬಂದಿಯೂ ಸೇರಿದಂತೆ ಇತರೆ ಎಲ್ಲ ವ್ಯವಸ್ಥೆಗಳ ಬಗ್ಗೆ ಕ್ರಮವಿಡಬೇಕಾಗುತ್ತದೆ.

ಕ್ರಿಯಾ ಯೋಜನೆಗಳ ಮೇಲಿನ ಅನುಷ್ಠಾನ ಕಾರ್ಯ ಅತ್ಯಂತ ಮಹತ್ವದ ಕಾರ್ಯ. ವಾರ್ಷಿಕ ಸಾಮಾನ್ಯ ಸಭೆಯು ಅನುಮೋದಿಸಿದ ಯೋಜನೆಗಳ ಅನುಷ್ಠಾನ ಆಡಳಿತ ಮಂಡಳಿಯದ್ದಾಗಿದೆ. ಒಟ್ಟಾರೆ ಅನುಮೋದಿತ ಯೋಜನೆಗಳನ್ನು ವಿಂಗಡಿಸಿ ಆದ್ಯತಾ ವಲಯಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಯೋಜನೆಯ ಅನುಷ್ಠಾನಕ್ಕೆ ಅಗತ್ಯವೆನಿಸಿದರೆ ಒಂದು ಪ್ರತ್ಯೇಕ ಸಮೀತಿಯನ್ನು ರಚಿಸಿ ಅನುಷ್ಠಾನದ ಹಂತಗಳನ್ನು ಅಧ್ಯಯನ ಮಾಡಿದ ನಂತರವೆ ಅವುಗಳನ್ನು ಜಾರಿ ಮಾಡುವುದು ಸೂಕ್ತ.

ಕ್ರಿಯಾಯೋಜನೆಯ ಅನುಷ್ಠಾನ ಮಾಡುವಾಗ ಸಾಧಕ ಬಾಧಕಗಳ ಸಂಪೂರ್ಣ ಅಧ್ಯಯನ ಅಗತ್ಯ. ಸ್ವಾಭಾವಿಕ ಸಂಪನ್ಮೂಲಗಳ, ಮಾನವ ಸಂಪನ್ಮೂಲಗಳ ಬಳಕೆ, ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಕ್ರಮ, ಅನುಷ್ಠಾನಕ್ಕಾಗಿ ವಾರ್ಷಿಕ ಆಯವ್ಯಯ ತಃಖ್ತೆಯಲ್ಲಿ ಈ ಯೋಜನೆಗಳಿಗೆ ಒದಗಿಸಿರುವ ಅವಕಾಶಗಳು, ಲಾಭನಷ್ಟಗಳ ಕಾರ್ಯಸಾಧ್ಯತಾ ವರದಿಯ ಸಿದ್ಧಪಡಿಸುವುದು, ಸದಸ್ಯರಿಗೆ ಒದಗಿಸಬಹುದಾದ ಹೆಚ್ಚುವರಿ ಸೌಲಭ್ಯಗಳು, ಸದಸ್ಯರಿಗೆ ನೀಡಬೇಕಾದ ಮಾಹಿತಿಗಳು, ನಿದೇಶಕರ ಹಾಗೂ ಸಿಬ್ಬಂದಿಯವರಿಗೆ ವಹಿಸಬಹುದಾದ ಜವಾಬ್ದಾರಿಗಳು ಹೀಗೆ ಅನುಷ್ಠಾನ ಪೂರ್ವಕಾರ್ಯಗಳು ಮತ್ತು ಅನುಷ್ಠಾನ ನಂತರದ ಕಾರ್ಯಗಳನ್ನು ಹಂತ ಹಂತವಾಗಿ ಕಾರ್ಯಗತ ಮಾಡುವ ಸಮಯ ಇದಾಗಿದೆ. ಕ್ರಿಯಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನವೆ ಸಹಕಾರಿಗಳ ಪ್ರಗತಿಯ ಹಾಗೂ ಉತ್ತಮ ಗುಣಮಟ್ಟದ ಕಾರ್ಯಚಟುವಟಿಕೆಗಳ ಸಂಕೇತ ಹಾಗೂ ಅಭಿವೃದ್ಧಿಯ ಪಥ.

**ಸಂಪಾದಕರು**

ಒಳಪುಟಗಳಲ್ಲಿ...

60ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ .............. 4

ಸಹಕಾರ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸಬೇಕು – ಸಚಿವ ಶ್ರೀ ಮಹದೇವ ಪ್ರಸಾದ್ .............. 5

ಸಹಕಾರ ಕ್ಷೇತ್ರವನ್ನು ಭ್ರಷ್ಟಾಚಾರದಿಂದ ಶುದ್ಧೀಕರಿಸಿ – ಯುವ ಸಹಕಾರಿಗಳಿಗೆ ಹಿರಿಯ ಸಹಕಾರಿ ಬಿ.ಎಸ್.ವಿಶ್ವನಾಥನ್ ಕರೆ .......... 6

ಮಹಿಳಾ ಸಬಲೀಕರಣ ಪ್ರಯತ್ನದತ್ತ ಸಂಯುಕ್ತ ಸಹಕಾರಿ – ಮಂಜುಳಾ ಪಾಟೀಲ್ .............. 7

ಸೌಹಾರ್ದ ಸಹಕಾರಿ ಕಾಯ್ದೆ ಆಶಯ, 1997ರ ಮೂಲ ಕಾಯ್ದೆ, 2004ರ ತಿದ್ದುಪಡಿಗಳು ಹಾಗೂ 2013ರ ತಿದ್ದುಪಡಿಗಳು ನಂತರದ ಬೆಳವಣಿಗೆಗಳ ಪಕ್ಷಿನೋಟ .............. 8

ಸ್ವಾಯತ್ತತೆಯ ಜೊತೆಗೆ ವೃತ್ತಿಪರತೆಯೂ ಸೇರಿದಲ್ಲಿ ಯಶಸ್ಸು ಸಾಧ್ಯ – ಶ್ರೀ ಸಿ.ಎಸ್.ವೀರೇಶ್ .............. 10

ತರಬೇತಿಯಿಂದ ಪರಿಣಿತಿ, ಪರಿಣಿತಿಯಿಂದ ಗುಣಮಟ್ಟ ಸುಧಾರಣೆ ಸಾಧ್ಯ – ಹೆಚ್.ವಿ.ರಾಜೀವ .............. 11

ನೂರಕ್ಕೆ ನೂರು ಸಾಲ ವಸೂಲಾತಿಗಾಗಿ ಕ್ರಮ : ಶ್ರೀ ಗುರುನಾಥ ಜ್ಯಾಂತಿಕರ್ ಕರೆ .............. 12

ಸಹಕಾರಿ ನಾಯಕತ್ವ – ಗುಣಲಕ್ಷಣಗಳು .............. 14

ಛಾಯಾಚಿತ್ರಗಳು .............. 16

ಅಧಿಸೂಚನೆ .............. 17,18

ವೆಬ್‌ಸೈಟ್ ಪರಿಚಯ .............. 19

ಕನ್ನಡ ನಾಡಿನ ಸಿರಿ ಬೆಳಗಿದ ರಾಜಮನೆತನಗಳು .............. 20

## ಮಾನ್ಯ ಸಹಕಾರ ಮಂತ್ರಿ ಶ್ರೀ ಮಹದೇವಪ್ರಸಾದರವರ ಅಧ್ಯಕ್ಷತೆಯಲ್ಲಿ

# 60ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ



60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯು ದಿನಾಂಕ : 22–10–2013 ರಂದು ವಿಧಾನ ಸೌಧದ ಸಮ್ಮೇಳನಾ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವ ಪ್ರಸಾದ್‌ರವರು ವಹಿಸಿದ್ದರು. ಸಪ್ತಾಹದ 7 ದಿನಗಳನ್ನು ವಿವಿಧ ಸಹಕಾರ ಮಹಾಮಂಡಳಗಳ ನೇತೃತ್ವದಲ್ಲಿ ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲು ತಿರ್ಮಾನಿಸ ಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಹೆಚ್. ಕೆ.ಪಾಟೀಲ್, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್.ಎಮ್.ಮಂಜುನಾಥಗೌಡ, ವಸತಿ ಮಹಾಮಂಡಳದ ಅಧ್ಯಕ್ಷ ಶಾಸಕ ಶ್ರೀ ಎಸ್.ಟಿ.ಸೋಮಶೇಖರ, ಮಹಾಮಂಡಳದ ಅಧ್ಯಕ್ಷ ಶಾಸಕ ಶ್ರೀ ಜಿ.ಟಿ.ದೇವೇಗೌಡ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಕ್ರೆಡಿಟ್ ಮಹಾಮಂಡಳದ ಶ್ರೀ ಬಿ.ಎಲ್.ಲಕ್ಕೇಗೌಡ, ಎಣ್ಣೆ ಬೀಜ ಮಹಾಮಂಡಳದ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನರೆಡ್ಡಿ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ವಿ.ಕೃಷ್ಣರಾವ್, ನಿಬಂಧಕ ಶ್ರೀ ಚನ್ನಪ್ಪಗೌಡರವರು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸಿ.ಎಸ್. ವೀರೇಶ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಸೇರಿದಂತೆ ಅನೇಕ ಅಧಿಕಾರಿಗಳು ಅನೇಕ ಸಂಸ್ಥೆಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

## ಸಹಕಾರ ಕ್ಷೇತ್ರ ಸಂಘಟಿತವಾಗಲು ಸದವಕಾಶ :

### ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಹೆಚ್. ಕೆ. ಪಾಟೀಲ್

ಸಹಕಾರ ಸಪ್ತಾಹದ ಆಚರಣೆ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಸಹಕಾರ ಕ್ಷೇತ್ರವನ್ನು ಸಂಘಟಿಸುವ ನಿಟ್ಟಿನಲ್ಲಿ ಸಹಕಾರಿ ಯಾಗುವಂತಾಗಬೇಕು. ಯಾಕೆಂದರೆ ಸಹಕಾರ ಕ್ಷೇತ್ರದ ಯಾವ ವಿಭಾಗವೂ ಅಷ್ಟೊಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಸಹಕಾರ ಕ್ಷೇತ್ರ ಕುಂದುತ್ತಾ ಇದೆ. ಇದರ ಕಾರ್ಯದಲ್ಲಿ ಜೀವತುಂಬುವ ಕಾರ್ಯ ಈ ಸಹಕಾರ ಸಪ್ತಾಹದ ಸಂದರ್ಭದಲ್ಲಾಗಬೇಕು. ಸಹಕಾರಿಗಳು ಕ್ರೀಯಾ ಶೀಲವಂತರಾಗಿ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ತಿಳಿಸಿದರು.

# ಸಹಕಾರ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸಬೇಕು – ಸಚಿವ ಶ್ರೀ ಮಹದೇವ ಪ್ರಸಾದ್

ಈ ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಈ ಕ್ಷೇತ್ರ ನಮ್ಮ ಜನರ ಜೀವನ ಪದ್ಧತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕ್ಷೇತ್ರ ಸೊರಗಬಾರದು ಬಲಿಷ್ಠವಾಗಬೇಕು. ಸರಕಾರದ ಅನೇಕ ಯೋಜನೆಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ತಲುಪಿಸುವ ಸಾಧನವಾಗಿರುವ ಈ ಕ್ಷೇತ್ರದ ಅಭಿವೃದ್ಧಿಗೆ ಈ ಸಹಕಾರ ಸಪ್ತಾಹ ಆಚರಣೆ ಪೂರಕವಾಗಬೇಕು. ವಿಷಯಗಳ ಬಗ್ಗೆ ಅರ್ಥಪೂರ್ಣ ವಿಚಾರಗಳು ಹರಿದು ಬರುವಂತಾಗಬೇಕು. ಜನಸಾಮಾನ್ಯರಿಗೆ ವಿಷಯ ಗಳು ತಿಳಿಯುವಂತಾಗಬೇಕು. ವ್ಯಾಪಕ ಪ್ರಚಾರ ಮಾಡಬೇಕು. ಜನಪ್ರತಿನಿಧಿಗಳನ್ನು ಸ್ಥಳಿಯ ಮುಖಂಡರುಗಳನ್ನು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿ ಎಂದು ತಿಳಿಸಿದರು.

14–11–2013ನೇ ದಿನದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ, 15–11–2013 ರಂದು ಅಪೆಕ್ಸ್ ಬ್ಯಾಂಕ್ ನೇತೃತ್ವದಲ್ಲಿ ಚಿಕ್ಕಮಗಳೂರಿನಲ್ಲಿ, ದಿನಾಂಕ 16–11–2013 ರಂದು ಸಹಕಾರ ಮಾರಾಟ ಮಹಾಮಂಡಳದ ನೇತ್ರತ್ವದಲ್ಲಿ, ದಿನಾಂಕ 17–11–2013 ರಂದು ಎಣ್ಣೆ ಬೀಜ ಸಹಕಾರ ಮಹಾಮಂಡಳದ ನೇತೃತ್ವದಲ್ಲಿ ರಾಯಚೂರು/ಚಿತ್ರದುರ್ಗದಲ್ಲಿ, ದಿನಾಂಕ 18–11–2013ರಂದು ಕ್ರೆಡಿಟ್ ಮಹಾಮಂಡಳ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕೋಲಾರದಲ್ಲಿ, 19–11–2013 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನೇತೃತ್ವದಲ್ಲಿ ಬಾಗಲಕೋಟೆಯಲ್ಲಿ ಹಾಗೂ ದಿನಾಂಕ 20.11.2013 ರಂದು ಕರ್ನಾಟಕ ಹಾಲು ಮಹಾಮಂಡಳದ ನೇತೃತ್ವದಲ್ಲಿ ಗುಂಡ್ಲುಪೇಟೆಯಲ್ಲಿ ಆಚರಿಸಲು ನಿರ್ಣಯಿಸಲಾಯಿತು.

ಈ ಬಾರಿಯ ಸಪ್ತಾಹದ ಆಚರಣೆಯ ಧ್ಯೇಯ "ಬದಲಾದ ಸಮಯದಲ್ಲಿ ಆರ್ಥಿಕ – ಸಾಮಾಜಿಕ ಪುನರುತ್ಥಾನಕ್ಕಾಗಿ ಸಹಕಾರ ಸಂಸ್ಥೆಗಳು" (Cooperatives for Socio-Economic Resurgence in changing time) ಎಂಬುದಾಗಿದೆ. ಈ ಅವಧಿಯಲ್ಲಿ ಸಹಕಾರಿಯಲ್ಲಿ ಸಭೆ ಸಮಾರಂಭಗಳನ್ನು ಹಮ್ಮಿ ಕೊಂಡು, ಸಹಕಾರ ಕುರಿತು ಪ್ರಬಂಧ, ಚರ್ಚಾಸ್ಪರ್ಧೆ, ಹಿರಿಯ ಸದಸ್ಯರಿಗೆ ಸನ್ಮಾನ, ಹೊಸ ಯೋಜನೆಗಳ ಅನುಷ್ಠಾನದ ಸಮಾರಂಭಗಳು, ಠೇವಣಿ ಸಂಗ್ರಹ, ಶೇರು ಸಂಗ್ರಹ, ಆರೋಗ್ಯ ತಪಾಸಣೆಗಳು, ರಕ್ತದಾನ ಶಿಬಿರಗಳು, ಗಿಡನೆಡುವುದು ಶಾಲಾಕಾಲೇಜುಗಳಿಗೆ ಪಠ್ಯಪುಸ್ತಕಗಳ ವಿತರಿಸುವುದು ಗ್ರಾಮ ಹಾಗೂ ನಗರಗಳ ಸ್ವಚ್ಚತಾ ಕಾರ್ಯಕ್ರಮಗಳು ಮುಂತಾದ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಸಹಕಾರಿಯ ಹಾಗೂ ಸಹಕಾರಿ ಕಾರ್ಯಕ್ಷೇತ್ರದ ಸಾಧನೆಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವುದು. ಏಳು ದಿಗಳಲ್ಲೂ ಸಹಕಾರಿ ಸಪ್ತವರ್ಣದ ಧ್ವಜವನ್ನು ಸಹಕಾರಿ ಸಂಸ್ಥೆಯ ಮೇಲೆ ಹಾರಾಡಿಸುವುದು.

ಸಹಕಾರ ಇಲಾಖೆ, ಸಂಯುಕ್ತ ಸಹಕಾರಿ ಹಾಗೂ ಕ್ರೆಡಿಟ್ ಮಹಾಮಂಡಳ ಮತ್ತು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಕೋಲಾರದ ರಂಗ ಮಂದಿರದಲ್ಲಿ ದಿನಾಂಕ : 18.11.2013ರ ಬೆಳಗ್ಗೆ 10 ಗಂಟೆಗೆ ಸಹಕಾರ ಸಪ್ತಾಹದ ಆಚರಣೆ ವ್ಯವಸ್ಥೆ ಮಾಡಲಾಗುತ್ತಿದೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಇತರ ಸಿಬ್ಬಂಧಿಯವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸೂಚಿಸಿದೆ.

## ಸಹಕಾರಿ ನಿಬಂಧಕರ ವಾರ್ತೆ

ಕರ್ನಾಟಕ ಸರ್ಕಾರ ಸಹಕಾರ ಇಲಾಖೆ, ಸಹಕಾರಿ ಸಂಘಗಳ ನಿಬಂದಕರ ಕಛೇರಿ ಇವರ ಪತ್ರ ಸಂಖ್ಯೆ ಆರ್‌ಎಸ್ ಆರ್ /ಸೌಹಾರ್ದ/ ನೋಂದಣಿ/ 200/2012–2013 ದಿನಾಂಕ 27–09–2013 ರಂದು ತಿಳಿಸಿದ ಪತ್ರದಲ್ಲಿ ಉದ್ದೇಶಿತ ಸಮರ್ಪಣಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ನೀಡಿರುವ ಅನುಮತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಸಾರ್ವಜನಿಕರು ಯಾವುದೇ ಕಾರಣಕ್ಕೂ ಷೇರು ಹಣ ಸಂಗ್ರಹಿಸದಿರಲು ಸೂಚಿಸಿದೆ. ಎಂದು ಡಾ॥ ಎನ್. ಎಸ್. ಚನ್ನಪ್ಪಗೌಡ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ತಿಳಿಸಿರುತ್ತಾರೆ.

## ಸಹಕಾರಿ ಇಲಾಖೆಯ ನೂತನ ಕಾರ್ಯದರ್ಶಿಯಾಗಿ ಡಾ.ಸಿ. ಸೋಮಶೇಖರ್



ಸಹಕಾರಿ ಇಲಾಖೆಯ ಕಾರ್ಯವನ್ನು ನಿರ್ವಹಿಸುತ್ತಿದ್ದ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೀ ಜಿ.ವಿ ಕೃಷ್ಣರಾವ್‌ರವರನ್ನು ಹೆಚ್ಚುವರಿ ಕಾರ್ಯ ದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಿ, ಡಾ॥ ಸಿ. ಸೋಮಶೇಖರ್‌ರವರನ್ನು ಸಹಕಾರಿ ಇಲಾಖೆಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

## 60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ದಿನಗಳು

ಧ್ಯೇಯ : "ಬದಲಾದ ಸಮಯದಲ್ಲಿ ಆರ್ಥಿಕ ಸಾಮಾಜಿಕ ಪುನರುತ್ಥಾನಕ್ಕೆ ಸಹಕಾರ ಸಂಸ್ಥೆಗಳು"
Theme : "Co-operative for Socio-economic resurgence in changing times"

| | |
|---|---|
| 14.11.2013 | "ಸಹಕಾರಿ ಆಡಳಿತ ನಾಯಕತ್ವ ಮತ್ತು ಸುಧಾರಣೆಗಳು"<br>"Co-operative Governance, Leadership and Reforms" |
| 15.11.2013 | "ಆರ್ಥಿಕ ಅಬಲರ ಸೇರ್ಪಡೆ ಹಾಗೂ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳು"<br>"Cooperatives for inclusive and sustainable development" |
| 16.11.2013 | "ಸಹಕಾರ ಮಾರಾಟ, ಸಂಸ್ಕರಣ ಮತ್ತು ಗ್ರಾಹಕ"<br>"Cooperative Marketing, Processing and Consumer" |
| 17.11.2013 | "ಸಹಕಾರ ಸಂಬಂಧಿ ತೆರಿಗೆ ಮತ್ತು ಕಾಯ್ದೆ"<br>"Cooperative Vis-à-vis Taxation and Law" |
| 18.11.2013 | "ಉತ್ತಮ ಜೀವನಕ್ಕಾಗಿ ಸಹಕಾರಿ ಗೃಹ ನಿರ್ಮಾಣ"<br>"Cooperative Housing for better living" |
| 19.11.2013 | "ಪಂಚಾಯತ್ ರಾಜ್ ಸಂಸ್ಥೆಗಳು – ಸಹಕಾರಿ ಸಂಸ್ಥೆಗಳ ನಡುವೆ ಸಮನ್ವಯ ಮತ್ತು ಆಹಾರ ಭದ್ರತೆ"<br>"Panchayat Raj Institutions and Cooperative Interface and Food Security and International day of toilets" |
| 20.11.2013 | "ಸಹಕಾರ ಸಂಸ್ಕೃತಿ ಮತ್ತು ಮೌಲ್ಯಗಳ ಉತ್ತೇಜನ ದಿನ"<br>"Promoting cooperative culture and values" |

# ಸಹಕಾರ ಕ್ಷೇತ್ರವನ್ನು ಭ್ರಷ್ಟಾಚಾರದಿಂದ ಶುದ್ಧೀಕರಿಸಿ – ಯುವ ಸಹಕಾರಿಗಳಿಗೆ ಹಿರಿಯ ಸಹಕಾರಿ ಬಿ.ಎಸ್.ವಿಶ್ವನಾಥನ್ ಕಳಕಳಿಯ ಕರೆ



ದೇಶದ ಅತ್ಯಂತ ಹಿರಿಯ ಸಹಕಾರಿ ದಾರ್ಶನಿಕ, ಚಿಂತಕ ಕರ್ನಾಟಕ ಸರಕಾರದ ಸಹಕಾರ ರತ್ನ ಹಾಗೂ ರೈಫೀಜನ್ ಮುಂತಾದ ಅನೇಕ ಪ್ರಶಸ್ತಿಗಳ ಪುಸ್ಕೃತರಾದ ಶ್ರೀ ಬಿ.ಎಸ್. ವಿಶ್ವನಾಥರವರನ್ನು ಇತ್ತೀಚೆಗೆ ಅವರೇ ಹುಟ್ಟು ಹಾಕಿ ಬೆಳೆಸಿದ ಸಂಸ್ಥೆಯಾದ ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಭೇಟಿಯಾದ ಸಂದರ್ಭದಲ್ಲಿ ಸಹಕಾರ ಕ್ಷೇತ್ರ ಬೆಳೆದು ಬಂದ ದಾರಿ, ಸಹಕಾರಿ ಧುರೀಣರು ಈ ಕ್ಷೇತ್ರವನ್ನು ಬೆಳೆಸಿಕೊಂಡು ಬಂದ ಬಗೆ, ಸರಕಾರದ ಪಾತ್ರ, ಸಹಕಾರಿ ಕ್ಷೇತ್ರದ ಸಾಧನೆಗಳು, ಸವಾಲುಗಳು, ಅವಕಾಶಗಳ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು. ಇತ್ತೀಚಿನ ದಿನಗಳಲ್ಲಿ ಯುವಕರು ಹೆಚ್ಚಾಗಿ ಸಹಕಾರಿ ಕ್ಷೇತ್ರದಲ್ಲಿ ಭಾಗವಹಿಸುತ್ತಿರುವುದು ಸಂತೋಷದ ವಿಷಯ. ರಾಜಕೀಯ ಕ್ಷೇತ್ರದ ಶುದ್ಧೀಕರಣದ ಅಗತ್ಯತೆಯ ಹಾಗೆ ಈಗ ಸಹಕಾರಿ ಕ್ಷೇತ್ರವನ್ನೂ ಶುದ್ಧೀಕರಿಸುವ ಜವಾಬ್ದಾರಿ ಯುವಕರ ಮೇಲಿದೆ. ಯುವಕರು ಸಹಕಾರಿ ತತ್ವಗಳನ್ನು ಅರ್ಥಮಾಡಿಕೊಂಡು ಸಹಕಾರ ಕ್ಷೇತ್ವನ್ನು ಅಧ್ಯಯನ ಮಾಡಿ ಈ ಕ್ಷೇತ್ರದ ಪ್ರಗತಿಗೆ ಶ್ರಮಿಸಬೇಕು ಎಂದು ಕಳಕಳಿಯಿಂದ ಕರೆ ನೀಡಿದರು. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ವಿಶ್ವನಾಥನ್‌ರವರು ಪ್ರಾಂತೀಯ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶಗಳಿವೆ. ಇದನ್ನು ಸದುಪಯೋಗ ಪಡಿಸಿಕೊಳ್ಳುತ್ತಿರುವ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಅಭಿನಂದನಾರ್ಹರು ಎಂದು ತಿಳಿಸಿದರು.

## ಮಹಿಳಾ ಸಬಲೀಕರಣ ಪ್ರಯತ್ನದತ್ತ ಸಂಯುಕ್ತ ಸಹಕಾರಿ – ಮಂಜುಳಾ ಪಾಟೀಲ್

**ಬೆಂಗಳೂರು** : ದಿನಾಂಕ 29–10–2013 ರಂದು ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯು ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಮಹಿಳಾ ದೌರ್ಜನ್ಯ ತಡೆ ಹಾಗೂ ಸಾಮಾಜಿಕ ಭದ್ರತೆ ಕುರಿತಾದ ತರಬೇತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕಿ



ಶ್ರೀಮತಿ ಮಂಜುಳಾ ಪಾಟೀಲ್ ರವರು ಸಂಸಾರ ಹಾಗೂ ಸಮಾಜದಲ್ಲಿ ಮಹಿಳೆಗೆ ಯಾವಾಗಲೂ ಗೌರವ ಸ್ಥಾನಮಾನ ಇದ್ದೆ ಇದೆ. ತಾಯಿಯಾಗಿ, ಹೆಂಡತಿಯಾಗಿ, ಅಕ್ಕತಂಗಿಯಾಗಿ, ಮಗಳಾಗಿ ಅನಾದಿ ಕಾಲದಿಂದಲೂ ಮಹಿಳೆ ಪೂಜ್ಯಳಾಗಿದ್ದಾಳೆ. ಆದರೆ ಇತ್ತೀಚಿನ ಬದಲಾದ ವ್ಯವಸ್ಥೆಗಳಲ್ಲಿ ಮಹಿಳೆ ಸಾಮಾಜಿಕ ಹಾಗೂ ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾಳೆ. ಇದನ್ನು ತಪ್ಪಿಸಲು ಸಮಾಜದ ವ್ಯವಸ್ಥೆಗಳಲ್ಲಿ ಮಾರ್ಪಾಡುಗಳಾಗಬೇಕು. ಮಹಿಳೆಯರಲ್ಲಿ ಮಾನಸಿಕ ಸ್ಥೈರ್ಯ ತುಂಬುವ ಕೆಲಸವಾಗಬೇಕಿದೆ. ಸಂಸಾರಗಳಲ್ಲಿ ಬಿರುಕುಗಳಾಗದಂತೆ ಹೊಂದಾಣಿಕೆಯ ಮನೋಭಾವಗಳು ಬೆಳೆಯುವ ನಿಟ್ಟಿನಲ್ಲಿ ಶಿಕ್ಷಣ ನೀಡುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆಯೊಂದಿಗೆ ಸಹಕರಿಸಿ ಉತ್ತಮ ತರಬೇತಿ ಆಯೋಜಿಸಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಸಂತೋಷ ವ್ಯಾಸ, ಶ್ರೀಮತಿ ಗೌರಮ್ಮ, ಶ್ರೀಮತಿ ವಿಮಲಾ, ಡಾ.ಸಾರನ್ಯ ರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸಂಚಾಲಕಿ ಶ್ರೀಮತಿ ಹೊಮಿಗ ರವರು ಸ್ವಾಗತಿಸಿದರು ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಡಾ ಗಣೇಶನ್ ಅಧ್ಯಕ್ಷತೆ ವಹಿಸಿದ್ದರು. ಜನೋದಯ ಸಂಸ್ಥೆಯ ಸಂಸ್ಥೆಯ ಶ್ರೀಮತಿ ಸಂತೋಷ ವ್ಯಾಸರವರು ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 38 ಜನ ಮಹಿಳೆಯರು ಭಾಗವಹಿಸಿದ್ದರು.

## ನವೆಂಬರ್ 29,30 ರಂದು ಏಷ್ಯಾ ಖಂಡದ 8ನೇ ಪ್ರಾಂತೀಯ ಸಹಕಾರಿ ಅಧ್ಯಯನ ಸಮ್ಮೇಳನ



ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಏಶಿಯ ಖಂಡದ ಪ್ರಾಂತೀಯ ಸಹಕಾರಿ ಅಧ್ಯಯನ ಸಮ್ಮೆಳನವು ಇದೇ ದಿನಾಂಕ 29, 30 ನವೆಂಬರ 2013 ರಂದು ಮೈಸೂರಿನ ಮಾನಸಗಂಗೋತ್ರಿ ಮೈಸೂರು ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ಹಾಗೂ ಸಹಕಾರ ಅಧ್ಯಯನ ವಿಭಾಗದ ನೇತ್ರತ್ವದಲ್ಲಿ ನಡೆಯಲಿದೆ. ಈ ಸಮ್ಮೆಳನದಲ್ಲಿ ಕನಿಷ್ಟ 20 ರಾಷ್ಟ್ರಗಳ ಸುಮಾರು 100 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಹಾಗೂ ಸಹಕಾರಿ ಕ್ಷೇತ್ರದ ಬಗ್ಗೆ 100 ವಿವಿಧ ವಿಷಯಗಳ ಬಗ್ಗೆ ತಜ್ಞರು ವಿಷಯ ಮಂಡನೆ (ಪೇಪರ್ಸ) ಮಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ವಿಷಯ ಮಂಡನೆ ಮಾಡಲಿದೆ ಹಾಗೂ ಈ ಕ್ಷೇತ್ರದ ಬೆಳವಣಿಗೆ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ವ್ಯವಸ್ಥೆ ಮಾಡಲಿದೆ.

## ಸೌಹಾರ್ದ ಸಹಕಾರಿಗಳ ವ್ಯಾಜ್ಯ ವಿಲೆವಾರಿಗಾಗಿ ಪ್ರತ್ಯೇಕ ಕೋರ್ಟ್ ಸರಕಾರದ ತಾತ್ವಿಕ ಒಪ್ಪಿಗೆ ರಾಜ್ಯದ ಸೌಹಾರ್ದ ಸಹಕಾರಿಗಳು ಮಾಹಿತಿ ಕಳುಹಿಸಲು ಸೂಚನೆ



ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ಶೀಘ್ರ ಇತ್ಯರ್ಥಕ್ಕಾಗಿ ಸೌಹಾರ್ದ ಸಹಕಾರಿಗಳಿ ಗಾಗಿಯೇ ಪ್ರತ್ಯೇಕ ಕೋರ್ಟಗಳ ಅಗತ್ಯತೆಯ ಬಗ್ಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ಸರಕಾರದ ಗಮನಹರಿಸಲು ವಿನಂತಿಸಲಾಗಿದೆ. ಈ ಬಗ್ಗೆ ಸಹಕಾರ ಇಲಾಖೆಯವರು ತಾತ್ವಿಕವಾಗಿ ತಮ್ಮ ಒಪ್ಪಿಗೆ ಸೂಚಿಸಿದ್ದು ಮುಂದಿನ ದಿನಗಳಲ್ಲಿ ಕ್ರಮವಿಡಲಾಗುತ್ತಿದೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳಲ್ಲಿ ವ್ಯಾಜ್ಯಗಳನ್ನು ಹಾಗೂ ಸಾಲ ವಸೂಲಾತಿ ಕಾರ್ಯವನ್ನು ಶೀಘ್ರಗತಿಯಲ್ಲಿ ನಿರ್ವಹಿಸಬಹುದಾಗಿದೆ. ಈ ಬಗ್ಗೆ ಈಗಾಗಲೇ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸಾಲ ವಸೂಲಾತಿಗೆ ಸಂಬಂದಿಸಿದಂತೆ ದಾಖಲಿಸಿದ ವ್ಯಾಜ್ಯಗಳ ಸಂಖ್ಯೆ, ದಾಖಲಿಸಿರುವ ಅಮಲ್ಜಾರಿ ಅರ್ಜಿಗಳ ಸಂಖ್ಯೆ ವಸೂಲಾಗಬೇಕಾದ ಮೊತ್ತ ಮುಂತಾದ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಲು ದಿನಾಂಕ 1–10–2013ರಂದು ಸುತ್ತೋಲೆ ಕಳುಹಿಸಿದೆ. ಕೂಡಲೇ ನಮೂನೆಯಲ್ಲಿ ಭರ್ತಿಮಾಡಿ ಕಳುಹಿಸಲು ಸೂಚಿಸಿದೆ.

# ಸೌಹಾರ್ದ ಸಹಕಾರಿ ಕಾಯ್ದೆ ಆಶಯ, 1997ರ ಮೂಲ ಕಾಯ್ದೆ, 2004ರ ತಿದ್ದುಪಡಿಗಳು ಹಾಗೂ 2013ರ ತಿದ್ದುಪಡಿಗಳು ನಂತರದ ಬೆಳವಣಿಗೆಗಳ ಪಕ್ಷಿನೋಟ

▸▸ **ಗುರುನಾಥ ಜ್ಯಾಂತಿಕರ,** ಅಧ್ಯಕ್ಷರು, ಕರಾಸೌಸಂಸನಿ., ಬೆಂಗಳೂರು.

**ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕಾಯ್ದೆಯ ಪ್ರೋತ್ಸಾಹ ಅಗತ್ಯ ಸುಭದ್ರವಾದ ಕಾಯ್ದೆ ಜಾರಿಯಲ್ಲಿದ್ದಾಗ ಮಾತ್ರ ಈ ಕ್ಷೇತ್ರದ ಬೆಳವಣಿಗೆ ನಿರೀಕ್ಷೆಯಂತೆ ಸಾಧ್ಯವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ಕಾಯ್ದೆಯನ್ನು ದುರ್ಬಲ ಪಡಿಸುವಂತಹ ಹಾಗೂ ಸೌಹಾರ್ದ ಸಹಕಾರಿಗಳಿಗೆ ತಪ್ಪು ಮಾಹಿತಿ ನೀಡಿ ಅವರನ್ನು ತಪ್ಪು ದಾರಿಗೆಳೆಯುವ ಪ್ರಯತ್ನಗಳು ನಡೆದಿವೆ. ಆದರೆ ಸಂಯುಕ್ತ ಸಹಕಾರಿಯು ಸತತವಾಗಿ ಈ ಕಾಯ್ದೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತನ್ನ ಹೋರಾಟ ಮಾಡುತ್ತಿದೆ. ಸಹಕಾರಿಗಳ ಗಮನ ಸೆಳೆಯುವುದಕ್ಕಾಗಿ ಈ ಲೇಖನ.**

ರಾಜ್ಯದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಅನುಷ್ಠಾನ ಒಂದು ಮಹತ್ವದ ಮೈಲಿಗಲ್ಲು. ಒಂದು ಶತಮಾನದ ಇತಿಹಾಸವಿರುವ ಈ ದೇಶದ ಸಹಕಾರಿ ಕ್ಷೇತ್ರದ ಬೆಳವಣಿಗೆಯನ್ನು ಗಮನಿಸಿದ ಯೋಜನಾ ಆಯೋಗದವರು ಈ ಚಳವಳಿಯ ಬೆಳವಣಿಗೆ ಈ ದೇಶದ ಅರ್ಥವ್ಯವಸ್ಥೆಯ ದೃಷ್ಟಿಯಿಂದ ಅಗತ್ಯವಾಗಿದೆ. ಸಹಕಾರಿ ಕ್ಷೇತ್ರ ಸಾಕಷ್ಟು ಮಹತ್ವದ ಪಾತ್ರವನ್ನು ನಿರ್ವಹಿಸಿದೆಯಾದರೂ ನಿರೀಕ್ಷಿಸಿದ ಸಾಧನೆಯನ್ನು ಮಾಡಲು ವಿಫಲವಾಗಿದೆ ಎಂದು ಈ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಅರ್ಧನಾರೀಶ್ವರನ್ ಸಮಿತಿಯನ್ನು ನೇಮಿಸಿದರು.



ಈ ಸಮಿತಿಯವರು ದೇಶದಾದ್ಯಂತ ಹರಡಿರುವ ಸಹಕಾರ ಚಳುವಳಿಯನ್ನು ಅಧ್ಯಯನಮಾಡಿ ಈ ದೇಶದಲ್ಲಿ ಸಹಕಾರ ಚಳುವಳಿ ವಿಫಲವಾಗಿದೆ. ದೇಶದ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿಗಾಗಿ ಗುಣಾತ್ಮಕವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ವಿಫಲತೆಯಲ್ಲಿ ಸರಕಾರದ ಅತಿಯಾದ ಹಸ್ತಕ್ಷೇಪವೇ ಮುಖ್ಯ ಕಾರಣ. ಆದ್ದರಿಂದ ಸರಕಾರದ ಕನಿಷ್ಟ ಪಾತ್ರವನ್ನು ಹೊಂದಿರುವ ಒಂದು ಮಾದರಿ ಸಹಕಾರಿ ಕಾಯ್ದೆಯ ಅಗತ್ಯವನ್ನು ಒತ್ತಿ ಹೇಳಿದರು.

ಈ ಹಿನ್ನೆಲೆಯಲ್ಲಿ ಚೌಧರಿ ಬ್ರಹ್ಮಪ್ರಕಾಶರವರ ನೇತ್ರತ್ವದಲ್ಲಿ ಮಾದರಿ ಸಹಕಾರಿ ಕಾಯ್ದೆಯನ್ನು ರಚಿಸಿ ಅದನ್ನು ಅಳವಡಿಸಿಕೊಳ್ಳಲು ದೇಶದ ಎಲ್ಲ ರಾಜ್ಯಗಳಿಗೆ ಕಳುಹಿಸಲಾಯಿತು. ಇದರ ಪರಿಣಾಮವಾಗಿ 1997ರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 2001ರಿಂದ ಜಾರಿಗೆ ಬಂದಿದೆ. ದೇಶದ 11 ರಾಜ್ಯಗಳಲ್ಲಿ ಮಾದರಿ ಕಾಯ್ದೆಯನ್ನು ವಿವಿಧ ಹೆಸರಿನಿಂದ ಜಾರಿಗೊಳಿಸಲಾಗಿದೆ. (ಕರ್ನಾಟಕ, ಆಂದ್ರಪ್ರದೇಶ, ಛತ್ತಿಸಗಡ, ಓರಿಸ್ಸಾ, ಜಮ್ಮುಕಾಶ್ಮೀರ, ಉತ್ತರಾಂಚಲ, ಬಿಹಾರ, ಜಾರ್ಖಂಡ, ಮಧ್ಯಪ್ರದೇಶ, ಆಸ್ಸಾಂ ಹಾಗೂ ಉತ್ತರಪ್ರದೇಶ)

ಕರ್ನಾಟಕದಲ್ಲಿ ಈ ಕಾಯ್ದೆ ಜಾರಿಮಾಡುವಾಗ ಕಾಯ್ದೆಯ ಆಶಯದ ಅತ್ಯಂತ ಮಹತ್ವದ ಅಂಶಗಳೆಂದರೆ,

1) ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು

2) ನೋಂದಣೆ ಮತ್ತು ರದ್ದಿಯಾತಿಗಳನ್ನು ಬಿಟ್ಟು ಉಳಿದಂತೆ ಸಹಕಾರಿಯ ಮುಕ್ತ ಕಾರ್ಯಾಚರಣೆಗೆ ತಡೆಯೊಡ್ಡುವ ಸರಕಾರದ ಎಲ್ಲ ರೀತಿಯ ನಿರ್ಬಂಧಗಳು ಮತ್ತು ನಿಯಂತ್ರಣಗಳು ಮತ್ತು ಹಸ್ತಕ್ಷೇಪವನ್ನು ನಿವಾರಿಸುವುದು. ರಾಜ್ಯದ ಸಹಕಾರಿಗಳು ಹಾಗೂ ರಾಜ್ಯ ಸರಕಾರ ಇವುಗಳನ್ನು ಗಮನಿಸುವುದು ಅಗತ್ಯ

2001ರಲ್ಲಿ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಸೌಹಾರ್ದ ಯುಗ ಪ್ರಾರಂಭ. ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ 2002 ರಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಶಾಸನ ಬದ್ಧ ರಚನೆಯಾಯಿತು. ನಂತರದಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಪ್ರಾರಂಭ.

ಈ ಕಾಯ್ದೆಯಡಿಯಲ್ಲಿ ಎಲ್ಲ ವಿಧವಾದ ಸೌಹಾರ್ದ ಸಹಕಾರಿಗಳ ರಚನೆಗೆ ಅವಕಾಶ ಒದಗಿಸಲಾಗಿತ್ತು. 1959ರ ಸಹಕಾರಿ ಸಂಘಗಳ ಕಾಯ್ದೆಯಿಂದ 1997ರ ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಗೂ ಅವಕಾಶ ಒದಗಿಸಲಾಗಿತ್ತು. ಕೆಲವು ಶಾಸನ ಬದ್ಧ ನಿಯಂತ್ರಣ ಕಾರ್ಯಗಳಾದ ಸಹಕಾರಿಗಳ (ಸಹಕಾರಿ ಸಂಸ್ಥೆಗಳ) ವಿಚಾರಣೆ ಚುನಾವಣೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಸಹ ಸಂಯುಕ್ತ ಸಹಕಾರಿಗೆ ವಹಿಸಲಾಗಿತ್ತು. ಸಹಕಾರಿಗಳ ಲೆಕ್ಕಪರಿಶೋಧನೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳು ನಿಗದಿತ ಅವಧಿಯೊಳಗೆ ನಡೆಯುವಂತೆ ಮೇಲುಸ್ತುವಾರಿಯ ಕಾರ್ಯದ ಜೊತೆಗೆ ಸಂಯುಕ್ತ ಸಹಕಾರಿಯು ಈ ಕ್ಷೇತ್ರದ ಬೆಳವಣಿಗೆಗಾಗಿ ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ದೇಶದಲ್ಲಿ


ಸಹಕಾರಿಗಳಿಂದ ಚುನಾಯಿತವಾದ ಸಮಿತಿಯೊಂದು ಸಹಕಾರಿ ಕ್ಷೇತ್ರದ ಬೆಳವಣಿಗೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಣೆಯ ಪ್ರಾರಂಭ. ಇದು ಕರ್ನಾಟಕದ ಸಹಕಾರಿ ಕ್ಷೇತ್ರದ ಹೆಮ್ಮೆ ಎಂದು ಹೇಳಬಹುದು. ಈ ಕ್ಷೇತ್ರದ ಕಾರ್ಯಾಚರಣೆ ಹಾಗೂ ಬೆಳವಣಿಗೆ ಉತ್ತಮವಾಗಿಯೆ ಸಾಗಿ ಬರುತ್ತಿದೆ.

2004ರಲ್ಲಿ ಇದ್ದಕ್ಕಿದ್ದಂತೆ ಈ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರಲಾಯಿತು. ಗೃಹನಿರ್ಮಾಣ ಸಹಕಾರಿಗಳನ್ನು ಸೌಹಾರ್ದ ಸಹಕಾರಿಯ ಕಾಯ್ದೆಗೆ ಹೊರತುಪಡಿಸಲಾಯಿತು. ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳಲ್ಲಿ ವಿಚಾರಣೆ ಮತ್ತು ಚುನಾವಣೆಗಳನ್ನು ಕೈಬಿಡಲಾಯಿತು. ಪರಿಣಾಮವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸರಕಾರದ ಪಾತ್ರಕ್ಕೆ ಹೆಚ್ಚಿನ ಅವಕಾಶವಾಯಿತು. ಇದು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ವ್ಯತಿರಿಕ್ತವಾದ ಬೆಳವಣಿಗೆ ಎಂದು ಹೇಳಬಹುದು.

ಈ ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸರಕಾರದ ಗಮನಕ್ಕೆ ತಂದು, ಮತ್ತೊಮ್ಮೆ ತಿದ್ದುಪಡಿಗಳನ್ನು ಮಾಡಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಸ್ಪಂದಿಸುವಂತೆ ವಿನಂತಿಸಲಾಯಿತು. ಈ ತಿದ್ದುಪಡಿಗಳಾದ ಮೇಲೂ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ತನ್ನ ಬೆಳವಣಿಗೆಯನ್ನು ವೇಗವಾಗಿ ಗುಣಾತ್ಮಕವಾಗಿ ಗಮನಾರ್ಹವಾಗಿ ಮುಂದುವರೆಸಿದೆ. ಕೇಂದ್ರ ಯೋಜನಾ ಆಯೋಗದವರು ಶಿಫಾರಸ್ಸು ಮಾಡಿದ ಮಾದರಿ ಸಹಕಾರ ಕಾಯ್ದೆಯನ್ನು ದೇಶದ ಎಲ್ಲ ರಾಜ್ಯಗಳು ಅಳವಡಿಸದಿರುವುದು, ದೇಶದ ಸಹಕಾರ ಕ್ಷೇತ್ರದಲ್ಲಿ ಸರಕಾರಗಳ ಹಸ್ತಕ್ಷೇಪ ಮುಂದುವರೆದಿರುವುದು, ಸಹಕಾರ ಕ್ಷೇತ್ರ ನಿರೀಕ್ಷಿಸಿದ ಸಾಧನೆಯನ್ನು ಸಾಧಿಸದಿರುವುದನ್ನು ಗಮನಿಸಿದ ಕೇಂದ್ರ ಸರಕಾರ 2012ರಲ್ಲಿ 97ನೇ ಸಂವಿಧಾನ ತಿದ್ದುಪಡಿಯನ್ನು ಮಾಡಿ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕುವುದು ಈ ದೇಶದ ಪ್ರಜೆಗಳ ಸಂವಿಧಾನಾತ್ಮಕ ಹಕ್ಕು ಎಂದು ತಿಳಿಸುವುದರ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಗೆ ಆದ್ಯತೆ ನೀಡಬೇಕು, ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರ ನೀಡಬೇಕು, ಸದಸ್ಯರ ಭಾಗವಹಿಸುವಿಕೆ ಇರಬೇಕು, ಸದಸ್ಯರದೇ ಹತೋಟಿ ಇರಬೇಕು, ಸರಕಾರಗಳ ಕನಿಷ್ಠ ಹತೋಟಿ ಇರಬೇಕು, ವ್ಯವಸ್ಥಿತವಾದ ಚುನಾವಣಾ ಆಯೋಗ ರಚನೆ, ನಿಗದಿತ ವೇಳೆಯಲ್ಲಿ ವ್ಯವಸ್ಥಿತವಾದ ಆಡಿಟ್, ವಾರ್ಷಿಕ ಮಹಾಸಭೆಗಳು ನಡೆಯುವ ಮತ್ತು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಬಲ್ಲ ಮಹತ್ವದ ಅಂಶಗಳನ್ನು ಪ್ರತಿಯೊಂದು ರಾಜ್ಯ ಸರಕಾರಗಳು ತಮ್ಮ ರಾಜ್ಯದ ಸಹಕಾರ ಕಾಯ್ದೆಗಳಲ್ಲಿ ಅಳವಡಿಸಬೇಕೆಂದು ನಿರ್ದೇಶನ ನೀಡುವುದರ ಜೊತೆಗೆ ಈ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಒಂದು ವರ್ಷದ ಅವಧಿಯನ್ನು ನೀಡಿ ಈ ಅವಧಿಯೊಳಗಾಗಿ ತಿದ್ದುಪಡಿಮಾಡದಿದ್ದರೆ ಈ ಸಂವಿಧಾನ ತಿದ್ದುಪಡಿಗಳು ತಂತಾನೆ ಜಾರಿಗೆ ಬಂದು ಬಿಡುತ್ತವೆ ಎಂದು ಸೂಚಿಸಿತು.

97ನೇ ಸಂವಿಧಾನ ತಿದ್ದುಪಡಿಗಳಲ್ಲಿ ಅಳವಡಿಸಿರುವ ಬಹುತೇಕ ಶೇಕಡಾ 80% ವಿಷಯಗಳನ್ನು ಕರ್ನಾಟಕ ಸೌಹಾರ್ದ ಕಾಯ್ದೆಯಲ್ಲಿ 12 ವರ್ಷಗಳ ಹಿಂದೆಯೆ ಅಳವಡಿಸಲಾಗಿತ್ತು ಎಂಬುದು ಗಮನಾರ್ಹ ವಿಷಯ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆಗೆ 2013ರಲ್ಲಿ ತಿದ್ದುಪಡಿಗಳನ್ನು ತರಲಾಗಿದೆ. ಈ ತಿದ್ದುಪಡಿಗಳಲ್ಲಿ ಸಂವಿಧಾನದ ಆಶಯ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಗಳಿಗೆ ವ್ಯತಿರಿಕ್ತವಾದ ಕೆಲವು ಅಂಶಗಳನ್ನು ಅಳವಡಿಸಲಾಗಿದೆ.

### ಅಲ್ಪಾವಧಿ ಕೃಷಿ ಸಾಲ ವ್ಯವಸ್ಥೆ 2 ಹಂತಗಳ ಯೋಜನೆ ಜಾರಿ ಚಿಂತನೆ ಕೈ ಬಿಟ್ಟ ನಬಾರ್ಡ್; ಸಹಕಾರಿಗಳ ಹೋರಾಟಕ್ಕೆ ಜಯ : ಎಸ್.ಆರ್. ಸತೀಶಚಂದ್ರ



ಹಾಲಿ ಜಾರಿಯಲ್ಲಿರುವ ಮೂರು ಹಂತಗಳ ಬದಲಿಗೆ ಎರಡು ಹಂತಗಳ ವ್ಯವಸ್ಥೆಯನ್ನು ಜಾರಿಮಾಡುವ ಡಿ.ಸಿ.ಸಿ. ಬ್ಯಾಂಕುಗಳು ಅಪೇಕ್ಸ್ ಬ್ಯಾಂಕಿನ ವ್ಯವಹಾರಿಕ ಕೇಂದ್ರಗಳಾಗಿ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಯೋಜನೆ ಭಕ್ಷಿ ವರದಿಯನ್ನು ನಬಾರ್ಡ್ ಕೈ ಬಿಟ್ಟಿರುವುದಾಗಿ ತಿಳಿಸಿದ್ದಾರೆ. ಇದು ಸಹಕಾರಿಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ  ಸಹಕಾರ ಭಾರತಿಯ ಶ್ರೀ ಎಸ್.ಆರ್. ಸತೀಶಚಂದ್ರರವರು ಹೇಳಿದ್ದಾರೆ.

ವಿಶೇಷವಾಗಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಪೂರಕವಾಗದಿರುವಂತಹ ಅಂಶಗಳು ಉಳಿದುಕೊಂಡಿವೆ. ಇದು ಹೇಗೆ ಆಯಿತು ಎನ್ನುವುದು ಒಂದು ಯಕ್ಷ ಪ್ರಶ್ನೆಯೆ ಎನ್ನಬಹುದು. ಸರಕಾರಕ್ಕೆ ಸಹಕಾರ ಇಲಾಖೆಗೆ ಸೌಹಾರ್ದ ಸಹಕಾರ ಕ್ಷೇತ್ರ ವ್ಯವಸ್ಥಿತವಾಗಿ ಬೆಳೆಯುವುದು ಬೇಡವೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಪೂರಕವಾಗದಿರುವ ಈ ವ್ಯವಸ್ಥೆಯನ್ನು ಹತೋಟಿಯಲ್ಲಿಡುವ ಕೆಲವು ಅಂಶಗಳಾದ ಸಹಸದಸ್ಯತ್ವವನ್ನು ಕೈ ಬಿಟ್ಟಿರುವುದು, (1959ರ ಕಾಯ್ದೆಯಲ್ಲಿ ಮುಂದುವರೆಸಿರುವುದು) ನಾಮ ಮಾತ್ರ ಸದಸ್ಯತ್ವಕ್ಕೆ ಷರತ್ತುಗಳು, ಆಡಳಿತ ಮಂಡಳಿ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚುವರಿ ಮೀಸಲಾತಿಯನ್ನು ಕಲ್ಪಿಸಿರುವುದು, ವಾರ್ಷಿಕ ಸಾಮಾನ್ಯ ಸಭೆಗೆ 20% ಕಡ್ಡಾಯ ಹಾಜರಾತಿ, ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುವಂತಹ ಸಹಕಾರಿಗಳಿಗೆ ಹೊರೆಯಾಗುವಂತಹ ಅವೈಜ್ಞಾನಿಕ ವಿಷಯಗಳು, ಪದಾಧಿಕಾರಿಗಳ ಚುನಾವಣೆಯನ್ನು ಸಹ ಚುನಾವಣಾ ಆಯೋಗಕ್ಕೆ ವಹಿಸಿರುವುದು – ಇವುಗಳ ಬಗ್ಗೆ ರಾಜ್ಯ ಸರಕಾರ ತೀವ್ರ ಗಮನ ಹರಿಸುವುದು ಅಗತ್ಯ. ಈ ಬಗ್ಗೆ ಈಗಾಗಲೆ ಮಾನ್ಯ ಸಹಕಾರ ಸಚಿವರ, ಸಹಕಾರ ಇಲಾಖೆಯ ವರಿಷ್ಠಾಧಿಕಾರಿಗಳ ಗಮನಕ್ಕೆ ತರಲಾಗಿದೆ.

ಈ ತಿದ್ದುಪಡಿಗಳು ಕೂಡಲೇ ಜಾರಿಯಾಗುವಂತೆ ಕ್ರಮವಿಡುವಂತೆ ಸಂಬಂಧಿಸಿದವರನ್ನೆಲ್ಲ ಭೇಟಿ ಮಾಡಿ ಮನವರಿಕೆ ಮಾಡಲಾಗಿದೆ. ಸಂಯುಕ್ತ ಸಹಕಾರಿಯ ಪ್ರಯತ್ನಗಳಿಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕೈ ಜೊಡಿಸುವುದು ಅಗತ್ಯವೆಂದು ಭಾವಿಸಿದೆ. ■

# ಸ್ವಾಯತ್ತತೆಯ ಜೊತೆಗೆ ವೃತ್ತಿಪರತೆಯೂ ಸೇರಿದಲ್ಲಿ ಯಶಸ್ಸು ಸಾಧ್ಯ – ಶ್ರೀ ಸಿ.ಎಸ್.ವೀರೇಶ್

ದಿನಾಂಕ : 23 ಅಕ್ಟೋಬರ್ 2013ರ ಬೆಂಗಳೂರು ವಿಭಾಗದ "ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ಕ್ರಮಗಳು" ತರಬೇತಿ ಕಾರ್ಯಕ್ರಮವನ್ನು ಮಾನ್ಯ ಸಹಕಾರಿಗಳ ಅಪರ ನಿಬಂಧಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸಿ ಎಸ್ ವೀರೇಶ್ ಇವರು ಉದ್ಘಾಟಿಸಿದರು.

ಶ್ರೀಯುತರ ಮಾತನಾಡುತ್ತಾ ಸೌಹಾರ್ದ ಸಹಕಾರಿಗಳು ಸ್ವಾಯತ್ತತೆ, ಸ್ವಾತಂತ್ರ್ಯಗಳಿಂದ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಾಗಿದ್ದು ಇವರ ಜವಾಬ್ದಾರಿಯೂ ಹೆಚ್ಚಿರುತ್ತದೆ. ಈ ಕ್ಷೇತ್ರದ ಮಾದರಿಯಲ್ಲಿ ಈಗ ಸಂವಿಧಾನ ತಿದ್ದು ಪಡಿಯೂ ಆಗಿದ್ದು ಎಲ್ಲ ಸಹಕಾರ ಸಂಸ್ಥೆಗಳಿಗೂ ಸ್ವಾಯತ್ತತೆ ದೊರೆತಿರುತ್ತದೆ. ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳು ಯಶಸ್ವಿಯಾಗಲು ವೃತ್ತಿಪರತೆಯನ್ನು ರೂಢಿಸಿಕೊಂಡು ಕಾರ್ಯ ನಿರ್ವಹಿಸಬೇಕಿದೆ ಎಂದರು. ಅಲ್ಲದೆ ಸಹಕಾರ ಸಪ್ತಾಹ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಕರೆ ನೀಡಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಸಂಯುಕ್ತ ಸಹಕಾರಿಯು ಕಳೆದ ಮೂರು ವರ್ಷಗಳಿಂದ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಈ ಹಿಂದೆ ಸಾಲಪತ್ರ ದಾಖಲಾತಿಗೆ ಹೆಚ್ಚಿನ ಮಹತ್ವ ನೀಡಿದ್ದೇವೆ. ಸೌಹಾರ್ದ ಸಹಕಾರಿಗಳು ದಾಖಲಾತಿ ಪ್ರಕ್ರಿಯೆಯಲ್ಲಿ ಪರಿಣಿತರಾಗಿದ್ದಾರೆಂದು ಭಾವಿಸಿ



ಅದರ ಮುಂದಿನ ಹಂತವಾಗಿ ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ಕ್ರಮಗಳನ್ನು ಈ ವರ್ಷದ ತರಬೇತಿ ವಿಷಯವನ್ನಾಗಿ ಆರಿಸಲಾಗಿದೆ ಎಂದರು. ಇದಲ್ಲದೆ ಸೌಹಾರ್ದ ಸಹಕಾರಿಗಳು ತರಬೇತಿ ಬಯಸುವ ವಿಷಯಗಳನ್ನು ತಿಳಿಸಿದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆರ್‌ಐಸಿಎಂ, ಬೆಂಗಳೂರು ಇದರ ಪ್ರಾದೇಶಿಕ ನಿರ್ದೇಶಕರಾದ ಡಾ. ಎನ್.ಗಣೇಶನ್ ಇವರು ಭಾಗವಹಿಸಿದ್ದರು. ಆರ್‌ಐಸಿಎಂ ಸಂಸ್ಥೆಯ ಪರವಾಗಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿರುವ ಶ್ರೀ ಗುರುನಾಥ ಜ್ಯಾಂತಿಕರ ಇವರಿಗೆ ಈ ಸಂದರ್ಭದಲ್ಲಿ ಇವರು ಅಭಿನಂದಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಸ್ವಾಗತಿಸಿದರು.

# ವಸೂಲಾತಿಯಿಂದ ಮರುಪಾವತಿಯೆಡೆಗೆ ನಡೆಸುವ ಗುಣಾತ್ಮಕ ಸಾಲದ ಪ್ರಮಾಣ ಹೆಚ್ಚಲಿ – ಶ್ರೀ ಜಿ.ಎಸ್. ರಮಣರೆಡ್ಡಿ



ದಿನಾಂಕ : 24 ಅಕ್ಟೋಬರ್ 2013ರ ಬೆಂಗಳೂರು ವಿಭಾಗದ "ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ಕ್ರಮಗಳು" ತರಬೇತಿ ಕಾರ್ಯಕ್ರಮವನ್ನು ಮಾನ್ಯ ಸಹಕಾರಿಗಳ ಅಪರ ನಿಬಂಧಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ.ಎಸ್. ರಮಣರೆಡ್ಡಿ ಇವರು ಉದ್ಘಾಟಿಸಿದರು.

ಶ್ರೀಯುತರ ಮಾತನಾಡುತ್ತಾ ಸಂಯುಕ್ತ ಸಹಕಾರಿಯು ನಿರಂತರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳನ್ನು ಪರಿಣಿತಿಯೆಡೆಗೆ ನಡೆಸಲು ಶ್ರಮಿಸುತ್ತಿದೆ. ಶಿಕ್ಷಣ ನಿಧಿಯ ಸಂಪೂರ್ಣ ಸದುಪಯೋಗದಲ್ಲಿ ತೊಡಗಿಕೊಂಡಿದೆ ಎಂದರು. ಅಲ್ಲದೆ, ಸೌಹಾರ್ದ ಸಹಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಗುಣಾತ್ಮಕ ಸಾಲಗಳನ್ನು ವಿತರಿಸಿದಲ್ಲಿ ಸಾಲ ವಸೂಲಾತಿಯ ಅವಶ್ಯಕತೆ ಉಂಟಾಗುವುದಿಲ್ಲ, ಸಾಲ ಮರುಪಾವತಿಯೆಡೆಗೆ ಸದಸ್ಯರನ್ನು ಜಾಗೃತರನ್ನಾಗಿಸುವ ಕೆಲಸವನ್ನು ಮಾಡಬೇಕಿದೆ ಎಂದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಸಂಯುಕ್ತ ಸಹಕಾರಿಯ ಪ್ರಕರಣಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ನಿಬಂಧಕರ ನ್ಯಾಯಾಲಯವನ್ನು ಸೌಹಾರ್ದ ಸಹಕಾರಿಗಳಿಗಾಗಿ ಪ್ರತ್ಯೇಕವಾಗಿ ಒದಗಿಸುವಂತೆ ಸರ್ಕಾರದಲ್ಲಿ ಮನವಿ ಮಾಡಲಾಗಿದ್ದು, ಸೌಹಾರ್ದ ಸಹಕಾರಿಗಳ ಪ್ರಕರಣಗಳ ಅಂಕಿ

ಸಂಕಿಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳು ಶೀಘ್ರದಲ್ಲಿ ತಮ್ಮಲ್ಲಿನ ಪ್ರಕರಣಗಳ ಸಂಖ್ಯೆ, ಮೊತ್ತ ಮತ್ತು ಯಾವ ಹಂತದಲ್ಲಿದೆ ಎನ್ನುವ ಮಾಹಿತಿಯನ್ನು ಕಳುಹಿಸಿಕೊಡಬೇಕು ಎಂದರು.

ಈ ತರಬೇತಿ ಕಾರ್ಯಕ್ರಮಗಳಲ್ಲಿ ಬೆಳಗಿನ ಅವಧಿಯಲ್ಲಿ ಶ್ರೀ ಎಸ್ ಎಸ್ ಕಟಗೇರಿ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ) ಇವರು "ದಾವಾ ದಾಖಲಾತಿ ಕ್ರಮಗಳು" ವಿಷಯಕ್ಕೆ ಸಂಬಂಧಿಸಿದಂತೆ ಉಪನ್ಯಾಸವನ್ನು ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಪಿ. ಎಂ ಜಾರ್ಜ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ) ಇವರು "ಸಾಲ ವಸೂಲಾತಿ ಕ್ರಮಗಳು" ವಿಷಯಕ್ಕೆ ಸಂಬಂಧಿಸಿದಂತೆ ಉಪನ್ಯಾಸವನ್ನು ನಡೆಸಿಕೊಟ್ಟರು. ದಿನಾಂಕ 23 ಅಕ್ಟೋಬರ್ 2013ರಂದು ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳು ಹಾಗೂ ದಿನಾಂಕ 24 ಅಕ್ಟೋಬರ್ 2013ರಂದು ಬೆಂಗಳೂರು ನಗರ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳು ಸೇರಿದಂತೆ ಒಟ್ಟೂ 52 ಸಂಸ್ಥೆಗಳಿಂದ 94 ಜನ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಭಾಗವಹಿಸಿ ಮಾತನಾಡುತ್ತಾ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿನ ಸಾಲಪತ್ರ ದಾಖಲಾತಿ, ಸಾಲವಸೂಲಾತಿ ಪ್ರಕ್ರಿಯೆಯ ಬಗ್ಗೆ ಮಾಹಿತಿ ಒದಗಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ನಿರ್ದೇಶಕರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ಇವರು ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ ನಡೆಸಿ ಪ್ರತಿನಿಧಿಗಳ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು.

ಸೌಹಾರ್ದ ಸಹಕಾರಿಗಳಿಗಾಗಿ ನಿಬಂಧಕರ ನ್ಯಾಯಾಲಯ, ಉಪವಿಧಿ ತಿದ್ದುಪಡಿ ಗೊಂದಲಗಳ ನಿವಾರಣೆಗಾಗಿ ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.

## ತರಬೇತಿಯಿಂದ ಪರಿಣಿತಿ, ಪರಿಣಿತಿಯಿಂದ ಗುಣಮಟ್ಟ ಸುಧಾರಣೆ ಸಾಧ್ಯ – ಹೆಚ್.ವಿ.ರಾಜೀವ

**ಮೈಸೂರು, ದಿನಾಂಕ 25 :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಇವರ ಸಹಯೋಗದೊಂದಿಗೆ ಮೈಸೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ / ಅಧಿಕಾರಿಗಳಿಗಾಗಿ 'ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ಕ್ರಮಗಳಿಗೆ ಸಂಬಂಧಿಸಿದ ತರಬೇತಿ ಕಾರ್ಯಾಗಾರವನ್ನು' ದಿನಾಂಕ 25.10.2013 ರಂದು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿ ರಸ್ತೆ ಮೈಸೂರು ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಹೆಚ್ ಸಿ ಜೋಷಿ, ಮೈಸೂರು ಜಿಲ್ಲಾ ಸಹಕಾರಿಗಳ ಉಪ ನಿಬಂಧಕರು ಇವರು ನೆರವೇರಿಸಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಹಾಗೂ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಹೆಚ್ ವಿ ರಾಜೀವ್, ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗಾಗಿ ಹಲವು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಕಾರ್ಯವಿಧಾನಗಳಲ್ಲಿ ಪರಿಣಿತಿ ಸಾಧಿಸಲು ಸಾಧ್ಯ. ಪರಿಣಿತಿಯಿಂದ ಸಹಕಾರಿಯ ಗುಣಮಟ್ಟ ಸುಧಾರಣೆ ಸಾಧ್ಯ. ಆದ್ದರಿಂದ ಎಲ್ಲ ಸಹಕಾರಿಗಳು ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವುದಕ್ಕೆ ಮೊದಲ್ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಎಲ್ ಸ್ವಾಮಿಗೌಡ ಮಾನ್ಯ ಪ್ರಾಂಶುಪಾಲರು, ಸಹಕಾರ ತರಬೇತಿ ಕೇಂದ್ರ ಮೈಸೂರು ಇವರು ಆಗಮಿಸಿದ್ದರು. ತರಬೇತಿ ಕಾರ್ಯಾಗಾರದಲ್ಲಿ ಶ್ರೀ ಶಿವಕುಮಾರ ಬಿರಾದಾರ, ವಿಭಾಗೀಯಾಧಿಕಾರಿ



ಮೈಸೂರು ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ ಎನ್ ಪರಶಿವಮೂರ್ತಿ, ಮಾನ್ಯ ಸಹಕಾರಿಗಳ ಅಪರ ನಿಬಂಧಕರು (ನಿವೃತ್ತ) ಇವರು ಸಾಲ ವಸೂಲಾತಿ ಕ್ರಮಗಳ ಕುರಿತು ಹಾಗೂ ಶ್ರೀ ಎ ಸಿ ದಿವಾಕರ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಆಡಳಿತ ತರಬೇತಿ ಸಂಸ್ಥೆ ಮೈಸೂರು ಇವರು ದಾವಾ ದಾಖಲಾತಿ ಕ್ರಮಗಳ ಕುರಿತು ಉಪನ್ಯಾಸವನ್ನು ನೀಡಿದರು. ನಂತರ ಸದರಿ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. ಸಭೆಯನ್ನು ಶ್ರೀ ವಿ ಜೆ ಕಾರಕೂನ ತರಬೇತಿ ಅಧಿಕಾರಿ ಇವರು ಸ್ವಾಗತವನ್ನು ಮಾಡುವ ಮೂಲಕ ಆರಂಭಿಸಿ ಅಂತಿಮವಾಗಿ ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಸಮಾರೋಪಗೊಳಿಸಿದರು. ಈ ಸಭೆಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

# ನೂರಕ್ಕೆ ನೂರು ಸಾಲ ವಸೂಲಾತಿಗಾಗಿ ಕ್ರಮ : ಶ್ರೀ ಗುರುನಾಥ ಜ್ಯಾಂತಿಕರ್ ಕರೆ



ಬೆಳಗಾವಿಯಲ್ಲಿ ದಿನಾಂಕ 25.10.2013ರಂದು ನಡೆದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರವರಿಂದ ಉದ್ಘಾಟನೆ.

ಪ್ರತಿಯೊಂದು ಸಹಕಾರಿಯು ಸಾಲ ಸುಸ್ತಿಯಾಗದಂತೆ ಸುಸ್ತಿಸಾಲ ಸಂಪೂರ್ಣ ವಸೂಲಾತಿಗೆ ಸಂಯುಕ್ತ ಸಹಕಾರಿಯ ರಾಜ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಸಹಕಾರಿಗಳಿಗೆ ಕರೆ ನೀಡಿದರು.

ಇಂದು ನಗರದ ಡಿ.ಸಿ.ಸಿ. ಬ್ಯಾಂಕಿನ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಬೆಳಗಾವಿ ಜಿಲ್ಲೆಯ ಬೆಳಗಾವಿ, ಗೋಕಾಕ, ಬೈಲಹೊಂಗಲ ಹಾಗೂ ಖಾನಾಪೂರು ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಕರು ಹಾಗೂ ಸಿಬ್ಬಂದಿಗಳಿಗಾಗಿ ಹಮ್ಮಿಕೊಂಡ ಸುಸ್ಥಿಸಾಲಗಳ ಮೇಲೆ ದಾವಾ ದಾಖಲಾತಿ ಹಾಗೂ ವಸೂಲಾತಿಯ ಕ್ರಮಗಳ ಬಗ್ಗೆ ಹಮ್ಮಿಕೊಂಡ ಕಾರ್ಯಾಗಾರದ ಉದ್ಘಾಟನೆಯನ್ನು ಉದ್ಘಾಟಿಸಿ ಮಾತನಾಡುತ್ತಾ ಸಹಕಾರಿಗಳು ಸಾಲ ನಿಡಿದ ಗಳಿಗೆಯಿಂದಲೆ ವಸೂಲಾತಿಯ ಕಾರ್ಯ ಪ್ರಾರಂಭವಾಗುತ್ತದೆ ಆದ್ದರಿಂದ ಯಾರಿಗೆ, ಯಾವಾಗ, ಹೇಗೆ, ಎಷ್ಟೂ ಸಾಲಗಳನ್ನು ನಿಡಬೇಕೆಂದು ಯೋಚಿಸಿ ಸಾಲ ನೀಡಬೇಕು ಸಂಯುಕ್ತ ಸಹಕಾರಿಯು ಕಾರ್ಯಶಿಲತೆ ಹೊಂದುವ ಗೋಸ್ಕರ, ಆಡಳಿತ ಮಂಡಳಿಯವರಿಗೂ ಹಾಗೂ ಸಿಬ್ಬಂದಿಗಳಿಗೆ ಮೇಲಿಂದ ಮೇಲೆ ಇಂತಹ ತರಬೇತಿಗಳನ್ನು ಹಮ್ಮಿಕೊಳ್ಳತಿದ್ದರಿಂದ ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳು ಸಧೃಡಹೊಂದುತ್ತ ಸಹಕಾರ ಕ್ಷೇತ್ರಕ್ಕೆ ತನ್ನದೆ ಆದ ಕೊಡುಗೆಯನ್ನು ನೀಡಿ, ವಿಶ್ವಾಸ ಗಳಿಸಿಕೊಂಡು ಸಹಕಾರ ಕ್ಷೇತ್ರಕ್ಕೆ ಬಲವನ್ನು ತಂದಿದೆ ಎಂದು ಹೆಳಲು ಸಂತೋಷವೆನಿಸುತ್ತಿದೆ ಆದರೂ ಸಹ ಕೆಲ ಕಾರಣಂತರಗಳಿಂದ ಸಹಕಾರಿಗಳು ನೀಡಿರುವ ಸಾಲಗಳು ಸುಸ್ಥಿ ಹೊಂದುತ್ತಿವೆ ಇಂತಹ ಸುಸ್ಥಿಹೊಂದಿದ ಸಾಲಗಳ ಮೇಲೆ ದಾವೆ ದಾಖಲಾತಿ ಮಾಡಿದರು ಅವುಗಳ ಪ್ರಕ್ರಿಯೆ ನಿಧಾನಗತಿಯಿಂದ ಸಾಗುತ್ತಿದ್ದು ಸುಸ್ಥಿ ಬಾಕಿಗಳ ವಸೂಲಿಗಾಗಿ ತ್ವರಿತ ಕ್ರಮ ಕೈಕೊಳ್ಳಲು ರಾಜ್ಯ ಸರಕಾರವು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಎರಡು ಪ್ರತ್ಯೇಕ ಸಹಕಾರಿ ನ್ಯಾಯಾಲಯವು ಪ್ರಾರಂಭಿಸಬೇಕು ಇದರಿಂದಾಗಿ ಶಿಘ್ರ ಪ್ರಕ್ರಿಯೆ ಮುಗಿದು ಮತ್ತಷ್ಟೂ ಸಹಕಾರ ಕ್ಷೇತ್ರ ಸಧೃಡ ಹೊಂದುತ್ತದೆ ಎಂದರು ಹಾಗಾಗಿ ಸರಕಾರ ಈ ಕಡೆ ಗಮನ ಹರಿಸಬೇಕೆಂದರು. ಸೌಹಾರ್ದ ಸಹಕಾರಿಗಳ ನ್ಯಾಯಾಲಯ ತರುವ ಪ್ರಯತ್ನದಲ್ಲಿ ಸಂಯುಕ್ತ ಸಹಕಾರಿಯು ಪ್ರಯತ್ನಿಸುತ್ತಿದೆ ಅದಕ್ಕಾಗಿ ಸಹಕಾರದ ಇಲಾಖೆ ಜೊತೆಗೆ ಮಾತುಕತೆ ನಡೆಯುತ್ತಿದೆ ಎಂದರು.

13ನೇ ಪುಟಕ್ಕೆ...

## ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಅವರ ನವೆಂಬರ್ ಮಾಹೆಯ ಪ್ರವಾಸ ಕಾರ್ಯಕ್ರಮಗಳು

- ದಿನಾಂಕ 1, 2, 3, 4, 5 – ಬೀದರ್
- ದಿನಾಂಕ 6 – ಗಂಗಾವತಿ
- ದಿನಾಂಕ 7 – ಬೆಂಗಳೂರು
- ದಿನಾಂಕ 8, 9, 10 – ಬೀದರ್
- ದಿನಾಂಕ 11 – ಶಿವಮೊಗ್ಗ
- ದಿನಾಂಕ 12 – ಕಾರವಾರ
- ದಿನಾಂಕ 13 – ಯಲ್ಲಾಪುರ
- ದಿನಾಂಕ 14, 15 – ಬೆಂಗಳೂರು
- ದಿನಾಂಕ 16 – ಶಿರಸಿ
- ದಿನಾಂಕ 17 – ಬೆಂಗಳೂರು
- ದಿನಾಂಕ 18 – ಕೋಲಾರ
- ದಿನಾಂಕ 19 – ಬೆಂಗಳೂರು
- ದಿನಾಂಕ 20 – ಚಾಮರಾಜ ನಗರ (ಗುಂಡ್ಲುಪೇಟೆ)
- ದಿನಾಂಕ 21, 22, 23, 24 ಬೆಂಗಳೂರು
- ದಿನಾಂಕ 29, 30 – ಮೈಸೂರು



## ಸಹಕಾರ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳಲ್ಲ, ಆದ್ದರಿಂದ ಆರ್‌ಟಿಐ ಅನ್ವಯಿಸದು – ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

## (Co-operative Societies don't fall within ambit of RTI Act : Supreme Court)

**ನವದೆಹಲಿ (ಪಿಟಿಐ) :** ಸಹಕಾರಿ ಸಂಘಗಳು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಸರ್ಕಾರದ ನಿಯಂತ್ರಣಕ್ಕೆ ಒಳಪಡುವುದರಿಂದ ಸಹಕಾರ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳೆನಿಸಿಕೊಳ್ಳುತ್ತವೆ ಎಂಬ ಕೇರಳ ಸರ್ಕಾರದ ಸುತ್ತೋಲೆಯನ್ನು ಎತ್ತಿ ಹಿಡಿದು ಅಲ್ಲಿನ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಮಾಹಿತಿ ಹಕ್ಕು ಕಾಯ್ದೆ ಕಲಂ 2(ಹೆಚ್)ನಲ್ಲಿ 'ಸಾರ್ವಜನಿಕ ಪ್ರಾಧಿಕಾರ'ದ ಬಗ್ಗೆ ಹೇಳಲಾಗಿದ್ದು, ಅದರಡಿಯಲ್ಲಿ ಸಹಕಾರ ಸಂಘಗಳು ಬರುವುದಿಲ್ಲ. ಆದ್ದರಿಂದ ಸಹಕಾರ ಸಂಘಗಳು ಸಾರ್ವಜನಿಕರಿಗೆ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಯಲ್ಲಿ ಮಾಹಿತಿಗಳನ್ನು ಪೂರೈಸುವುದು ಕಡ್ಡಾಯವಲ್ಲ ಎಂದು ನ್ಯಾ. ಕೆ ಎಸ್ ರಾಧಾಕೃಷ್ಣನ್ ಮತ್ತು ಎ.ಕೆ.ಸಿಕ್ರಿ ಅವರನ್ನು ಒಳಗೊಂಡ ವಿಭಾಗೀಯ ಪೀಠ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ.

ತಳಪ್ಪಲಂ ಸರ್ವಿಸ್ ಕೋ ಆಪರೇಟೀವ್ ಬ್ಯಾಂಕ್ ಲಿ. & ಅದರ್ಸ್ ಹಾಗೂ ಕೇರಳ ರಾಜ್ಯ ಸರ್ಕಾರದ ನಡುವಿನ ವ್ಯಾಜ್ಯದ ಬಗ್ಗೆ ತೀರ್ಪು ನೀಡುತ್ತಾ – ಸಹಕಾರಿಗಳ ನಿಬಂಧಕರಿಗೆ ಸಹಕಾರ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಮಾತ್ರ ನೀಡಲಾಗಿದ್ದು, ಸಹಕಾರ ಸಂಸ್ಥೆಗಳ ದೈನಂದಿನ ವ್ಯವಹಾರವನ್ನು ಅಥವಾ ಆಡಳಿತ ಮಂಡಳಿಯ ನಿರ್ಧಾರಗಳನ್ನು ನಿಯಂತ್ರಿಸುವುದಾಗಲಿ ಅಥವಾ ಅಡ್ಡಿಯನ್ನುಂಟು ಮಾಡುವುದಾಗಲಿ ಮಾಡುವಂತಿಲ್ಲ, ಸಹಕಾರ ಸಂಸ್ಥೆಗಳು ಸರ್ಕಾರದ ಮಾನ್ಯತೆ ಪಡೆದ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್ ಮುಂತಾದ ಶಾಸನಾತ್ಮಕ ಪ್ರಾಧಿಕಾರದ ಉಸ್ತುವಾರಿಗೆ ಒಳಪಡುತ್ತದೆ. ಆದರೆ ಅಷ್ಟಕ್ಕೇ ಸಹಕಾರ ಸಂಸ್ಥೆಗಳ ಎಲ್ಲ ವ್ಯವಹಾರವನ್ನು ಸರ್ಕಾರವೇ ನಿಯಂತ್ರಿಸುತ್ತದೆ ಎನ್ನಲಾಗುವುದಿಲ್ಲ. ಸರ್ಕಾರ ಉಸ್ತುವಾರಿ ನೋಡಿಕೊಂಡ ಮಾತ್ರಕ್ಕೆ ಸಹಕಾರಿ ಸಂಘಗಳು ಸಾರ್ವಜನಿಕ ಸ್ವತ್ತು ಅಥವಾ ಸಂಸ್ಥೆಗಳು ಎನಿಸಿಕೊಳ್ಳುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯ ಪಟ್ಟಿದೆ.

**ಕೇರಳ ಸರ್ಕಾರದ ಸುತ್ತೋಲೆ :** ಎಲ್ಲ ಸಹಕಾರಿ ಸಂಘ ಸಂಸ್ಥೆಗಳು ರಾಜ್ಯ ಶಾಸನ ಸಭೆ ರೂಪಿಸಿದ ಕಾನೂನುಗಳಿಗೆ ಅನುಗುಣವಾಗಿ ರಚಿತ ವಾಗಿದ್ದು, ಸರ್ಕಾರದ ರಿಜಿಸ್ಟ್ರಾರ್ ನಿಯಂತ್ರಣಕ್ಕೆ ಒಳಪಟ್ಟಿವೆ. ಹೀಗಾಗಿ ಇವು ಸಾರ್ವಜನಿಕ ಪ್ರಾಧಿಕಾರಗಳಾಗಿವೆ ಎಂದು ಕೇರಳ ಸರ್ಕಾರ 2006ರಲ್ಲಿ ಸುತ್ತೋಲೆ ಹೊರಡಿಸಿತ್ತು. ಸರ್ಕಾರದ ಈ ನಿರ್ಣಯವನ್ನು ಅಲ್ಲಿನ ಹೈಕೋರ್ಟ್ ಸಹ ಎತ್ತಿ ಹಿಡಿದಿತ್ತು. ಪ್ರಸ್ತುತ ಸುಪ್ರೀಂ ಕೋರ್ಟ್ ಈ ಆದೇಶವನ್ನು ರದ್ದುಗೊಳಿಸಿದೆ.

ಕೇಸ್ ವಿವರ - CIVIL APPEAL NO. 9017 OF 2013, (Arising out of SLP (C) No.24290 of 2012)

Thalappalam Ser. Coop. Bank Ltd. and others /Versus/ State of Kerala and others

WITH CIVIL APPEAL NOs. 9020, 9029 & 9023 OF 2013 (Arising out of SLP (C) No.24291 of 2012, 13796 and 13797 of 2013)

## ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯ ತೃಪ್ತಿಕರ : ಶಿವಕುಲಕರ್ಣಿ

...12ನೇ ಪುಟದಿಂದ

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಹಕಾರ ಇಲಾಖೆಯ ಬೆಳಗಾವಿ ಪ್ರಾಂತಿಯ ಜಂಟಿ ನಿಬಂಧಕರಾದ ಶ್ರೀ ಶಿವು ಕುಲಕರ್ಣಿ ಮಾತನಾಡುತ್ತ ರಾಜ್ಯದಲ್ಲಿರುವ ಎರಡು ಕಾಯ್ದೆಗಳು ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಹಕಾರವಾಗಿದೆ ಸೌಹಾರ್ದ ಕಾಯ್ದೆ ರಚನೆಯಿಂದಲೂ ಸಹ ನಾನು ಗಮನಿಸುತ್ತಿದ್ದು ಸಹಕಾರ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆ ಹೊಂದಿದ್ದು ಇದರ ಬೆಳವಣಿಗೆಗೆ ಸಹಕಾರ ಇಲಾಖೆ ಯಾವಗಲೂ ಸಹಕಾರಿಯಾಗಿದೆ ಎಂದರು. ಸಾಲ ಮಂಜೂರಿ ಹಾಗೂ ವಸೂಲಿಯು ಒಂದು ಚಾಣಕ್ಷತನ ಕ್ರಮವಾಗಿದ್ದು ಅದನ್ನು ಸರಿಯಾಗಿ ಅಳವಡಿಸಿಕೊಂಡಲ್ಲಿ ಸಾಲಗಳು ಸುಸ್ಥಿಬಾಕಿ ಆಗುವುದಿಲ್ಲ ಎಂದು ಹೇಳಿದರು.

ಕೆಲವು ಸೌಹಾರ್ದ ಸಹಕಾರಿಗಳು ಚುನಾವಣೆಯನ್ನು ಜರುಗಿಸಿ ಕೊಂಡಿರುವುದಿಲ್ಲ ಹಾಗೂ ಉಪವಿಧಿಗಳಿಗೆ ಇನ್ನೂ ಸಮಾಗ್ರತಿದ್ದುಪಡಿಯನ್ನು ಮಾಡಿಕೊಂಡಿರುವುದಿಲ್ಲ ಕೂಡಲೇ ಮಾಡಿಸಿಕೊಳ್ಳಬೇಕೆಂದು ಮತ್ತೊಬ್ಬ ಮುಖ್ಯ ಅತಿಥಿಯಾಗಿ ಬಂದ ಸಹಕಾರ ಸಂಘಗಳ ಉಪ ನಿಬಂಧಕರು ಬೆಳಗಾವಿಯರಾದ ಶ್ರೀ ಈ.ಬಿ. ಯಳ್ಳಳ್ಳಿಯವರು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರರ ನಿರ್ದೇಶಕರಾದ ಶ್ರೀ ಜಯಾನಂದ ಬಿ. ಜಾಧವ ಇವತ್ತಿನ ತರಬೇತಿಯಲ್ಲಿ ಎಲ್ಲ ಉಪನ್ಯಾಸಗಳನ್ನು ಸರಿಯಾಗಿ ಕೇಳಿಕೊಂಡು ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಸಹಕಾರಿಗಳಿಗೆ ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ವೇದಿಕೆ ಮೇಲೆ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಕಾಂತ ಹತನೂರೆ ಉಪಸ್ಥಿತರಿದ್ದರು. ನಿರೂಪಣೆಯನ್ನು ರಿಜನಲ ಮ್ಯಾನೇಜರಾದ ಶ್ರೀ ಜಿ.ಎಸ್. ಟೋಪಣ್ಣವರ ನೆರವೇರಿಸಿದರು

ಬೆಳಗೆಯಿಂದ ಸಾಯಂಕಾಲ ನಡೆದ ಸುಸ್ಥಿ ಸಾಲ ಬಾಕಿಗಳ ಮೇಲೆ ದಾವಾ ದಾಖಲಾತಿ ಹಾಗೂ ವಸೂಲಾತಿಯ ಕ್ರಮಗಳ ಬಗ್ಗೆ ಇಲಾಖೆಯ ನಿವೃತ್ತ ಅಧಿಕಾರಿಯಾದ ಹುಬ್ಬಳ್ಳಿಯ ಶ್ರೀ ಎಸ್.ಜಿ.ಜೋಶಿ ಉಪನ್ಯಾಸ ನೀಡಿದರು 4 ತಾಲೂಕುಗಳಿಂದ 150ಕ್ಕೂ ಹೆಚ್ಚು ಮುಖ್ಯಕಾರ್ಯನಿರ್ವಹಕರು ಹಾಗೂ ಸಿಬ್ಬಂದಿಯವರು ತರಬೇತಿಯ ಲಾಭವನ್ನು ಪಡೆದುಕೊಂಡರು.

# ಸಹಕಾರಿ ನಾಯಕತ್ವ – ಗುಣಲಕ್ಷಣಗಳು



ಶ್ರೀ ಬಿ.ಎ. ಮಹದೇವಪ್ಪ,
ಸಹಕಾರ ಸಂಘಗಳ ಅಪರ ನಿಬಂಧಕರು
(ನಿವೃತ್ತ) ಮತ್ತು ಸಹಕಾರಿ ತರಬೇತಿದಾರರು.



ಹಿಂದಿನ ಸಂಚಿಕೆಯಿಂದ...

ಮೊದಲು ಸಾಲಿನಲ್ಲಿ ನಿಲ್ಲಲು ಏನು ಮಾಡಬೇಕು ಎಂಬುದನ್ನು ಮನದಟ್ಟು ಮಾಡಿಸುವ ಮಾಡುವ ಕಲೆ ಎಲ್ಲರದ್ದಾಗಬೇಕು. ವರ್ತನೆಯಲ್ಲಿ ಪರಿವರ್ತನೆ ಯಾಗಬೇಕಾಗುತ್ತದೆ. ತರಬೇತಿ ಮತ್ತು ಒಳ್ಳೆಯ ಅಭ್ಯಾಸಗಳಿಂದ ಮನುಷ್ಯ ಪ್ರಾಣಿ ಗಿಡ ಮರಗಳಲ್ಲೂ ಬದಲಾವಣೆ ಉಂಟಾಗುತ್ತದೆ. ಬೀದಿ ನಾಯಿಯನ್ನು ಪೋಲೀಸ್ ನಾಯಿಯನ್ನಾಗಿ, ಕೋತಿಗೆ ಸಲಾಂ ಹೊಡೆಸುವ ಅಭ್ಯಾಸ, ಅಂಕು ಡೊಂಕಾಗಿ ಬೆಳೆಯುವ ಗಿಡ ಮರಗಳನ್ನು, ತರಕಾರಿಗಳನ್ನು ಕಲ್ಲುಕಟ್ಟಿ ನೇರವಾಗಿ ಬೆಳೆಯುವಂತೆ ಮಾಡಲು ಸಾಧ್ಯವಿರುವಾಗ ಮಾನವನಿಗೆ ಅದು ಏಕೆ ಸಾಧ್ಯವಾಗುವುದಿಲ್ಲ.

ನಾಯಕತ್ವವನ್ನು ಬೆಳೆಸುವ ಪ್ರಯತ್ನದಲ್ಲಿ ಇವೆಲ್ಲ ಅಗತ್ಯ. ಒಂದು ವ್ಯವಸ್ಥೆಯನ್ನು ನಡೆಸಲು ಎಷ್ಟೆಷ್ಟೇ ಉತ್ತಮ ಪದ್ಧತಿಗಳಿದ್ದರೂ ಸಮರ್ಥ ನಾಯಕತ್ವ ಇಲ್ಲದಿದ್ದರೆ ಯಾವ ಪ್ರಗತಿಯೂ ಆಗುವುದಿಲ್ಲ.

ನಮ್ಮ ದೇಶವನ್ನೇ ಉದಾಹರಣೆಯಾಗಿ ವಿವರಿಸುವುದಾದರೆ 28 ರಾಜ್ಯಗಳು 6 ಕೇಂದ್ರಾಡಳಿತ ಪ್ರದೇಶಗಳು, 120 ಕೋಟಿಗೂ ಹೆಚ್ಚು ಜನ ಸಂಖ್ಯೆ, 1652 ಭಾಷೆಗಳು 7,000 ಕ್ಕೂ ಅಧಿಕ ಪತ್ರಿಕೆಗಳು, 232 ರೇಡಿಯೂ ಸ್ಟೇಶನಗಳು, 500ಕ್ಕೂ ಅಧಿಕ ಟಿ.ವಿ.ಚಾನೆಲಗಳು, 1 ವರ್ಷದಲ್ಲಿ 6000ಕೋಟಿಗೂ ಜಾಸ್ತಿ ಬಂಗಾರ ಕೊಳ್ಳುವಿಕೆ, 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಶೇಕಡಾ 55% ಅಂದರೆ ಯುವ ಭಾರತ (ಯಂಗ ಇಂಡಿಯಾ), ಅಪಾರ ಸ್ವಾಭಾವಿಕ ಸಂಪತ್ತು ಹಾಗೂ ಅಪಾರ ಮಾನವ ಸಂಪನ್ಮೂಲ ಇದ್ದಾಗ್ಯೂ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ 132ನೇ ಸ್ಥಾನ, ವಿಶ್ವದ ಆರ್ಥಿಕ ಸ್ಥಿತಿಯಲ್ಲಿ 49 ನೇ ಸ್ಥಾನ, ರೂಪಾಯಿ ಮೌಲ್ಯದಲ್ಲಿ 45 ನೇ ಸ್ಥಾನ, ಸ್ವಚ್ಛತೆ ಹಾಗೂ ಆರೋಗ್ಯದ ವಿಷಯದಲ್ಲಿ 20 ನೇ ಸ್ಥಾನ, ಏಡ್ಸ್ ನಂತಹ ರೋಗದ ವಿಚಾರದಲ್ಲಿ 2 ನೇ ಸ್ಥಾನ, ಹಗರಣಗಳ ವಿಷಯದಲ್ಲಿ 3ನೇ ಸ್ಥಾನದಲ್ಲಿದೆ. ಈ ಸಮಸ್ಯೆಗಳನ್ನು ಬಗೆ ಹರಿಸಿಕೊಂಡು ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಹೊಂದಿದ ಭಾರತವೆಂದು ಕರೆಯಿಸಿಕೊಳ್ಳಲು ಸಮರ್ಥ ನಾಯಕತ್ವದ ಅವಶ್ಯಕತೆಯಿದೆ ಎಂಬುದನ್ನು ಒಪ್ಪಲೇ ಬೇಕಾದ ವಿಷಯ. ಅಭಿವೃದ್ಧಿ ಹೊಂದಿದ ಭಾರತದಲ್ಲಿ ಜೀವಿಸುವುದು ಇಂದಿನ ನಮ್ಮ ಯುವ ಜನರ ಅಪೇಕ್ಷೆಯಾಗಿದೆ. ಇದಕ್ಕೆ ಸ್ಪಂದಿಸುವ ಸಮರ್ಥ ನಾಯಕತ್ವ ಇಂದಿನ ಅವಶ್ಯಕತೆ.

ನಾಯಕರಾದವರು ಆಯಸ್ಕಾಂತದಂತೆ ಜನರನ್ನು ತನ್ನೆಡೆಗೆ ಅಕರ್ಷಿಸಿ ತಂಡವನ್ನು ಕಟ್ಟುತ್ತಾನೆ. ವೈಫಲ್ಯತೆಯಲ್ಲೂ ಪ್ರೋತ್ಸಾಹಕರ ನಾಯಕತ್ವವನ್ನು ನೀಡುತ್ತಾನೆ. ಸಮಸ್ಯೆಗಳಿಗೆ ಹೆದರುವುದಿಲ್ಲ. ಇತರರು ತನಗೆ ಏನು ಮಾಡಬಲ್ಲರು ಎನ್ನುವುದಕ್ಕಿಂತ ತಾನು ಇತರರಿಗೆ ಏನು ಮಾಡಬಲ್ಲೆ ಎಂದು ಯೋಚಿಸುತ್ತಾನೆ. ಬದ್ಧತೆಯಿಂದ ಕೆಲಸ ಮಾಡುತ್ತಾನೆ. ನಾಯಕನಾದವನು ಪ್ರತಿ ರಾತ್ರಿ ಶಾಂತವಾಗಿ ನಿದ್ರಿಸುತ್ತಾನೆ. ಇತರರಿಗೂ ನಿದ್ರಿಸುವಂತೆ ಮಾಡುತ್ತಾನೆ ಎಂಬ ಚೈನಾ ಗಾದೆಯಂತೆ ಅವನ ಕಾರ್ಯನಿರ್ವಹಣೆ ಇರುತ್ತದೆ. ಅಲೆಕ್ಸಾಂಡರನಿಂದ ಅಬ್ರಹಾಂ ಲಿಂಕನ್ ವರೆಗೆ ಗಾಂಧೀಜಿಯಿಂದ ಕಲಾಂರವರೆಗೆ, ಬಿಥೋವೇನ್ನಿಂದ ರೆಹಮಾನವರೆವಿಗೂ ಶ್ರೇಷ್ಠ ವ್ಯಕ್ತಿಗಳು ಅವರ ಅಂತರಾತ್ಮದ ಕರೆಯಂತೆ ಕೆಲಸ ಮಾಡಿದವರು ವಿಶ್ವಮಾನ್ಯರಾದವರು. ಇವರು ನಿಜವಾದ ಶ್ರೇಷ್ಠ ನಾಯಕರು.

ನಮ್ಮ ದೇಶದ ಕೆಲವು ಅಗ್ರಗಣ್ಯ ನಾಯಕತ್ವದ ಗುಣ ಹೊಂದಿದ ಮಹಾಪುರುಷರ ಜೀವನದಿಂದ ಕಲಿಯಬೇಕಾದುದು ಸಾಕಷ್ಟಿದೆ. ಶ್ರೀ ಕೃಷ್ಣ ಮಹಾಭಾರತದ ಸೂತ್ರಧಾರಿ ಅವನದು ಸ್ಪಷ್ಟ ನಿರ್ದೇಶನ ಉತ್ತಮ ಕೌನ್ಸಿಲಿಂಗ್, ರಾಮಾಯಣದ ಮರ್ಯಾದಾ ಪುರುಷೋತ್ತಮನೆಂದು ಕರೆಯಲ್ಪಡುವ ಶ್ರೀ ರಾಮಚಂದ್ರನಲ್ಲಿ ಕರ್ತವ್ಯ ಪಾಲನೆ, ಜವಾಬ್ದಾರಿಯನ್ನು ವಹಿಸಿಕೊಳ್ಳುವಿಕೆ ವಿದ್ವತ್ತಿಗೆ ಗೌರವ ನಿಡುವ ಕಲೆಗಳು. ಹನುಮಂತನಲ್ಲಿ ವಿವೇಚನೆ ಬದ್ಧತೆ ಕಾರ್ಯ ತತ್ಪರತೆಯನ್ನು, ಭೀಷ್ಮನಲ್ಲಿ ನುಡಿದಂತೆ ನಡೆಯುವುದು ನಮ್ಮನ್ನು ನಾವು ಅರ್ಥಮಾಡಿಕೊಳ್ಳುವುದು, ಬುದ್ಧನಲ್ಲಿ ಒಳ್ಳೆಯ ದೃಷ್ಟಿ, ಒಳ್ಳೆಯ ಕೆಲಸ, ಒಳ್ಳೆಯ ಮಾತು, ಒಳ್ಳೆಯ ವರ್ತನೆ, ಒಳ್ಳೆಯ ಜೀವನ, ಒಳ್ಳೆಯ ಪ್ರಯತ್ನ, ಒಳ್ಳೆಯ ಆಲೋಚನೆ, ಒಳ್ಳೆಯ ಧ್ಯಾನ. ಯೇಎಸು ಕ್ರಿಸ್ತನಲ್ಲಿ ಪ್ರೀತಿ ಕ್ಷಮೆ, ಮಹಮ್ಮದ್ ಪೈಗಂಬರನಲ್ಲಿ ಸಹೋದರತೆ, ಗುರುನಾನಕರಲ್ಲಿ ಪಾಸಿಟಿವ್ ಥಿಂಕಿಂಗ್, ಗ ಚಾಣಕ್ಯನಲ್ಲಿ ಅಂದುಕೊಂಡಿದ್ದನ್ನು ಸಾದಿಸುವಿಕೆ, ಸ್ವಾಮಿ ವಿವೇಕಾನಂದನಲ್ಲಿ ಕರ್ತವ್ಯ ಪ್ರಭೋದಕತೆ, ಮಹಾತ್ಮ ಗಾಂಧಿಜಿಯವರ ಜೀವನವೇ ಒಂದು ಸಂದೇಶ, ಲಾಲ ಬಹಾದ್ದೂರ ಶಾಸ್ತ್ರಿಯವರಲ್ಲಿ ಸರಳತೆ, ನೆಲ್ಸನ್ ಮಂಡೇಲಾರವರಲ್ಲಿ ಅದಮ್ಯ ಚೈತನ್ಯ ಮುಂತಾವುಗಳು ಒಬ್ಬ ನಾಯಕನೆನಿಸಿಕೊಳ್ಳುವವನಿಗೆ ಅನುಕರಣಿಯ ಗುಣಗಳು.

ಬಾಂಗ್ಲಾ ದೇಶದ ಡಾ ಮುಹಮ್ಮದ್ ಯುನಸ್ರವರು ಅಂದು ಕೊಂಡಿದ್ದನ್ನೆಲ್ಲ ಮನುಷ್ಯ ಸಾಧಿಸುವಾಗ ಬಡತನ ನಿವಾರಣೆ ಏಕೆಏಕೇ ಸಾಧ್ಯವಿಲ್ಲ ವೆಂದು ಹೇಳಿ ಅದರಂತೆ ಅನೇಕ ಯೋಜನೆಗಳನ್ನು ಜಾರಿ ಮಾಡಿರುವುದು ಅಧ್ಯಯನ ಯೋಗ್ಯವಲ್ಲವೇ?. ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಸಹಾಯ ಮಾಡುವ ಕೈಗಳು ಮೇಲು ಎಂದು ಹೇಳಿದಂತೆ ನಡೆಯಲಿಲ್ಲವೇ? ಇಂತಹ ಎಷ್ಟೂ ಉಧಾಹರಣೆಗಳನ್ನು ನಾಯಕರಾದವರು ಅಧ್ಯಯನ ಮಾಡುವುದು ಉತ್ತಮ.

ನಾಯಕತ್ವವು ಪಾರದರ್ಶಕವಾಗಿರಬೇಕು. ವ್ಯವಹಾರಗಳಲ್ಲಿ ಸ್ಪಷ್ಟತೆ,

ಸ್ವಚ್ಛತೆ, ಸರಳತೆ ಇರಬೇಕು. ತನ್ನೊನ್ನೂಂದಿಗೆ ಸಂಸ್ಥೆಯೂ ಉತ್ತಮವಾಗಿ ಬೆಳೆಯುವಂತೆ ಮಾಡಬೇಕು. ನ್ಯಾಯ ನೀತಿ ನಾಯಕನ ಹೆಗ್ಗುರುತಾಗಬೇಕು. ಎಲ್ಲರಲ್ಲೂ ಸಮಾನ ಭಾವದಿಂದ ಇರಬೇಕು. ಜ್ಞಾನವನ್ನು ಬೆಳೆಸಿಕೊಳ್ಳುವ ಹವ್ಯಾಸದವನಾಗಿರಬೇಕು. ಪಲಾಯನವಾದಿಯಾಗಬಾರದು. ಅವಕಾಶ ವಾದಿಯಾಗಬಾರದು. ದೂರದೃಷ್ಟಿಯುಳ್ಳವರಾಗಿರಬೇಕು. ವಿಷಯಗಳ ಬಗ್ಗೆ ನಿರ್ಣಯಿಸುವ ಸಾಮರ್ಥ್ಯರ್ಥವುಳ್ಳವನಾಗಿರಬೇಕು. ವಿಷಯವನ್ನು ಸ್ಪಷ್ಟವಾಗಿ ತಿಳಿಸುವ, ವಿವರವಾಗಿ ಪರಿಶೀಲಿಸುವ, ಸಮುದಾಯವನ್ನು ಒಪ್ಪಿಸುವ ಸಾ ಮರ್ಥ್ಯರ್ಥವುಳ್ಳವರಾಗಿರಬೇಕು.

**ಸಹಕಾರಿ ನಾಯಕ :** ಒಂದು ಸಹಕಾರಿಯ ಯಶಸ್ಸು ದಕ್ಷ ನಾಯಕತ್ವ, ಪ್ರಜ್ಞಾವಂತ ಸದಸ್ಯ, ನಿಷ್ಠಾವಂತ ಸಿಬ್ಬಂದಿಯವರನ್ನು ಅವಲಂಬಿಸುತ್ತದೆ. ಸಹಕಾರ ವ್ಯವಸ್ಥೆ ಒಂದು ಆರ್ಥಿಕ ವ್ಯವಸ್ಥೆ. ಈ ವ್ಯವಸ್ಥೆಯ ಮಾರ್ಗದರ್ಶಕನೆ ಸಹಕಾರಿ ನಾಯಕ. ಸಹಕಾರಿ ಮೌಲ್ಯ ಮತ್ತು ತತ್ವಗಳನ್ನು ಅರ್ಥಮಾಡಿಕೊಂಡು ಅಚರಣೆಯಲ್ಲಿ ತರಬೇಕು. ಸಂಸ್ಥೆಯ ಉದ್ದೇಶಗಳನ್ನು ತಿಳಿದುಕೊಂಡಿರಬೇಕು. ಸಂಸ್ಥೆಯ ಉಪವಿಧಿ, ಕಾಯ್ದೆ, ನಿಯಮಗಳನ್ನು ತಿಳಿದಿರಬೇಕು. ಯಾವುದೆ ಒತ್ತಡಕ್ಕೆ ಮಣಿಯಬಾರದು. ವ್ಯಕ್ತಿಗಿಂತ ಸಂಸ್ಥೆ ದೊಡ್ಡದು ಎಂಬ ಬದ್ಧತೆಯಿರಬೇಕು. ಸದಸ್ಯರ ಅಭಿವೃದ್ಧಿಯೇ ಮುಖ್ಯ ಗುರಿಯಾಗಿರಬೇಕು. ಉತ್ತಮ ಜ್ಞಾನ ಹಾಗೂ ಆಡಳಿತ ಕುಶಲತೆಯನ್ನು ಹೊಂದಿರುವುದು ಅವಶ್ಯಕ. ಸೃಜನ ಶೀಲತೆಯನ್ನು ಹೊಂದಿರಬೇಕು. ವ್ಯವಸ್ಥೆಯಲ್ಲಿ ನಾನೇನು ಮಾಡಬಲ್ಲೆ? ಈ ವ್ಯವಸ್ಥೆಯಿಂದ ನನಗೇನು ಬೇಕು ವ್ಯವಸ್ಥೆಗೆ ನಾನು ಹೇಗೆ ಸೂಕ್ತವಾಗುತ್ತೇನೆ ಎಂದು ಆಲೋಚಿಸಬೇಕು.

ಸಮಸ್ಯೆಗಳನ್ನು ಶಾಂತ ಸ್ವಭಾವದಿಂದ ಎದುರಿಸುವ ಬಗೆ ಹರಿಸುವ ಪ್ರಯತ್ನವಾದಿಯಾಗಿರಬೇಕು. ಜನರನ್ನು ಮತ್ತು ಅವರ ಸ್ವಭಾವವನ್ನು ಅರಿತವನಾಗಿರಬೇಕು. ಅವರನ್ನು ತನ್ನೊನ್ನೊಟ್ಟಿಗೆ ಮುನ್ನಡೆಸುವ ಸ್ವಭಾವವಿರಬೇಕು. ಸದಸ್ಯರ ಕನಸುಗಳನ್ನು ಸಾಕಾರಗೊಳಿಸುವದೇ ಸಹಕಾರಿ ನಾಯಕನ ಕಾಯಕವಾಗಬೇಕು. ಇದೇ ಸಹಕಾರ ನಾಯಕತ್ವದ ಮಹತ್ವ ಗುಣಲಕ್ಷಣಗಳು. ■



ನವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ವಾರ್ಷಿಕ ಸರ್ವ ಸದಸ್ಯರ ಸಭೆ.



ಶ್ರೀರಾಮ ಪತ್ತಿನ ಸೌಹಾರ್ದ ಸಹಕಾರಿ ನಿ., ಉಡುಪಿ. ಇದರ ಸಾಮಾನ್ಯ ಸಭೆ.

## ವಿವಿಧ ಸಹಕಾರ ಸಂಘಗಳಿಗೆ ಪದಾಧಿಕಾರಿಗಳ ಆಯ್ಕೆ

ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೆಂಗಳೂರು.



ಶ್ರೀ ಕೆ.ವಿ.ರೆಡ್ಡಿ
ಅಧ್ಯಕ್ಷರು



ಶ್ರೀ ಎನ್.ರಾಮಸ್ವಾಮಿ ರೆಡ್ಡಿ
ಉಪಾಧ್ಯಕ್ಷರು

ಶ್ರೀ ಮಹಾಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ವಿಜಾಪುರ.



ಶ್ರೀ ಎಸ್. ಜಿ. ಚಿಂಚೋಳ್ಳಿ
ಅಧ್ಯಕ್ಷರು



ಶ್ರೀ ಎಂ. ಎಸ್. ಮಠ
ಉಪಾಧ್ಯಕ್ಷರು

## 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 09.12.2013 ರಿಂದ 18.12.2013 ರವರೆಗೆ ಗುಲ್ಬರ್ಗಾ ಜಿಲ್ಲೆಯ ಕಮಲಾಪುರದಲ್ಲಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ. ಈ ತರಬೇತಿ ಕಾರ್ಯಕ್ರದ ಸಂಪೂರ್ಣ ವಿವರಗಳ ಸುತ್ತೋಲೆಯನ್ನು ಎಲ್ಲ ಸಹಕಾರಿಗಳಿಗೆ ಕಳುಹಿಸಿದೆ.

ಅಕ್ಟೋಬರ್ ಮಾಹೆಯ ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟಿಸಲಾಗಿದೆ. ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಮಾಹಿತಿ ಲಭ್ಯವಿದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಸೂಚಿಸಿದೆ. ನೋಂದಣಿ ಕೊನೆಯ ದಿನಾಂಕ : 25-11-2013.



ಕುರುಹಿನ ಶೆಟ್ಟಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್‌ನ 2ನೇ ವರ್ಷದ ಸರ್ವಸದಸ್ಯರ ಸಭೆ



ಶ್ರೀ ಮಹಾಲಕ್ಷ್ಮಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ
3ನೇ ವಾರ್ಷಿಕ ಸಾಮಾನ್ಯ ಸಭೆ



ಕೋಣಂದೂರು ನವೋದಯ ವಿವಿದೋದ್ದೇಶ
ಸೌಹಾರ್ದ ಸಹಕಾರಿಯ ನೂತನ ಶಾಖೆ ಉದ್ಘಾಟನೆ



ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಹಾಸನದ 2012–13ನೇ ಸಾಲಿನ ಸಾಮಾನ್ಯ ಸರ್ವ ಸದಸ್ಯರ ಸಭೆ.



ಪರಿವರ್ತನ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ.,
ಮೈಸೂರು ಇದರ 13ನೇ ವರ್ಷದ ಸರ್ವ ಸದಸ್ಯರ ಸಭೆ.



ಸುಭಾಷ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ
ಇದರ ಸರ್ವ ಸದಸ್ಯರ ಸಭೆ.



ರೇವಾ ವಿವಿಧೋದ್ದೇಶ ಸೌಹರ್ದ ಸಹಕರಿ ನಿ., ಚಾಮರಾಜ ನಗರ ಇದರ 2012–13 ನೇ ಸಾಲಿನ ಸರ್ವಸದಸ್ಯರ ಸಭೆ.

## ಕರ್ನಾಟಕ ಸರ್ಕಾರ
## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

ಸಂಖ್ಯೆ : ಸಚುಆ/31/ಚುನಾವಣೆ/2014/2013–14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ : 30.10.2013

## ಅಧಿಸೂಚನೆ

ವಿಷಯ :– ದಿನಾಂಕ : 31.03.2014ಕ್ಕೆ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಮಂಡಲಿ ಅವಧಿ ಮುಗಿಯಲಿರುವ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.

* * *

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಆಯೋಗದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39ಎ (2) (ಎ) ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಆಯೋಗವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿದೆ. ಅಧಿನಿಯಮ ಪ್ರಕರಣ 39ಎಎ (15)(ಎ) ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 6 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಆಯೋಗವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಆಯೋಗಕ್ಕೆ / ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ರ ನಿಯಮ 13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 5ಬಿ(3)ಗಳ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದಾಗಿದೆ.

1. ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ
2. ಆಡಳಿತ ಮಂಡಲಿಗೆ ಆಯ್ಕೆಯಾಗಬೇಕಾಗಿರುವ ಚುನಾಯಿತ ನಿರ್ದೇಶಕರ ಸಂಖ್ಯೆ.
3. ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ
4. ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು.

ಪ್ರಾಥಮಿಕ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಸಂಬಂಧ ಆಯೋಗವು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. ದಿನಾಂಕ:31.03.2014ಕ್ಕೆ ಮಂಡಲಿಯ ಪದಾವಧಿಯು ಮುಗಿಯಲಿರುವ ಪ್ರಕರಣಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿಯ ಮುಂದಿನ ಅವಧಿಗೆ ಚುನಾವಣೆ ನಡೆಸುವ ಬಗ್ಗೆ ಸಹಕಾರ ಚುನಾವಣಾ ಆಯೋಗವು ಅಗತ್ಯ ಕ್ರಮಕೈಗೊಳ್ಳಬೇಕಾಗಿರುತ್ತದೆ. 2014 ರಲ್ಲಿ ಲೋಕಸಭೆಗೆ ಚುನಾವಣೆಯನ್ನು ನಡೆಸಬೇಕಾಗಿದ್ದು, ಈ ಸಂಬಂಧ ಕೇಂದ್ರ ಚುನಾವಣಾ ಆಯೋಗವು ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದೆ. ಅಲ್ಲದೇ 2014 ರ ಮಾರ್ಚ್ ಮಾಹೆಯಲ್ಲಿ ಶಾಲಾ ಕಾಲೇಜುಗಳಲ್ಲಿ ವಾರ್ಷಿಕ ಅಂತಿಮ ಪರೀಕ್ಷೆಗಳು ನಿಗದಿಯಾಗುವ ಕಾರಣ ಅಧಿಕಾರಿಗಳು/ಸಿಬ್ಬಂದಿ/ಕಟ್ಟಡಗಳ ಲಭ್ಯತೆಗಳನ್ನು ಗಮನದಲ್ಲಿಟ್ಟುಕೊಂಡು 2014 ರ ಫೆಬ್ರವರಿ ಮಾಹೆಯಿಂದಲೇ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಆಯೋಗವು ಬಂದಿದ್ದು, ಈ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಆಯೋಗವು ಈ ಕೆಳಕಂಡ ಅವಧಿಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು ಮಂಡಲಿ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ. ಅದರಂತೆ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿದೆ.

| ಕ್ರ ಸಂ | ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು | ಚುನಾವಣೆ ನಡೆಸಬೇಕಾದ ಅವಧಿ /ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 02.02.2014 ಭಾನುವಾರ |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 09.02.2014 ಭಾನುವಾರ |
| 3 | ಪಟ್ಟಣ ಸಹಕಾರ ಬ್ಯಾಂಕುಗಳು, ಗ್ರಾಹಕರ ಸಹಕಾರ ಸಂಘಗಳು , ಪಿಕಾರ್ಡ್ ಬ್ಯಾಂಕುಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಸೌಹಾರ್ದ ಹಾಗೂ ಇತರೆ ಪತ್ತಿನ ಸಹಕಾರ ಸಂಘಗಳು ಹಾಗೂ ದಿನಾಂಕ:02.02.2014ರಂದು ಚುನಾವಣೆ ನಡೆಸದೇ ಉಳಿದ ಹಾಲು ಉತ್ಪಾದಕರ ಸಹಕಾರ ಸಂಘಗಳು. | 16.02.2014 ಭಾನುವಾರ<br>17.02.2014 ಸೋಮವಾರ |
| 4 | ಗೃಹ ನಿರ್ಮಾಣ ಸಹಕಾರ ಸಂಘಗಳು, ಎಲ್ಲಾ ಪತ್ತೇತರ ಸಹಕಾರ ಸಂಘಗಳು, ಇತರೆ ಎಲ್ಲಾ ಸಹಕಾರ ಸಂಘಗಳು | 23.02.2014 ಭಾನುವಾರ |
| 5 | ಚುನಾವಣೆ ನಡೆಸಲು ಬಾಕಿ ಉಳಿದ ಇತರೆ ಯಾವುದೇ ಸಹಕಾರ ಸಂಘಗಳು | 02.03.2014 ಭಾನುವಾರ |

ಅಧಿನಿಯಮ ಪ್ರಕರಣ 28ಬಿ ರೀತ್ಯಾ ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ ಮಂಡಲಿಯ ಸದಸ್ಯರ ಸಾಮಾನ್ಯ ಚುನಾವಣೆಯನ್ನು ಮೇಲ್ಕಂಡ ಅವಧಿಯಲ್ಲಿ ನಡೆಸಿ, ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವುದು.

ಸಂಬಂಧಿಸಿದ ಸಹಕಾರ ಸಂಘಗಳು /ಸಹಕಾರಿಗಳು ಆಯಾ ವರ್ಗಗಳಿಗೆ ಗೊತ್ತುಪಡಿಸಲಾದ ಅವಧಿಯಲ್ಲಿ ಮಂಡಲಿಯ ಚುನಾವಣೆಗಳನ್ನು ನಡೆಸತಕ್ಕದ್ದು ಮತ್ತು ಗೊತ್ತುಪಡಿಸಿದ ಅವಧಿಯಲ್ಲಿ ಚುನಾವಣೆ ನಡೆಸುವ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದು ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಚುನಾವಣೆ ನಡೆಸುವ ಸಂಬಂಧ ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಪ್ರಕ್ರಿಯೆಗಳ ಕುರಿತು ಚೆಕ್‌ಲಿಸ್ಟ್ ಲಗತ್ತಿಸಿದೆ.

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

(ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯನ್ನು ಸಂಪರ್ಕಿಸುವುದು ಅಥವಾ ಸಹಕಾರ ಚುನಾವಣಾ ಆಯೋಗ 2ನೇ ಮಹಡಿ, ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳ, ನಿ. ನಂ.3 ಎಸ್.ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು 560004. ಕಚೇರಿ ದೂರವಾಣಿ – 080 26600461. ಶ್ರೀ ಎನ್.ಸಿ.ಮುನಿಯಪ್ಪ ಚುನಾವಣಾ ಆಯುಕ್ತರು 9448482412, ಶ್ರೀ ಬಿ.ಹೆಚ್.ಮಂಜಪ್ಪ ಚುನಾವಣಾ ಆಯೋಗದ ಕಾರ್ಯದರ್ಶಿ 9945011822, ಸಂಪರ್ಕಅಧಿಕಾರಿ ಶ್ರೀ ಹೊನ್ನೆಗೌಡ 9900546564, web: ceckar.in, E-Mail I.D. coeckarnataka@gmail.com

# ಜಗತ್ತಿನ ಬೃಹತ್ ಮಹಿಳಾ ಸಂಘಟನೆ – 'ಸೇವಾ' ಇದರ ವೆಬ್‌ತಾಣ

http://www.sewa.org/

ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಭಾರತೀಯ ಸಮಾಜದಲ್ಲಿನ ಪುಟ್ಟ ಪುಟ್ಟ ನಿರ್ಲಕ್ಷಿತ ಅಂಶಗಳನ್ನು ಗಮನಿಸಿ ಸಹಕಾರಿ ಆಂದೋಲನವನ್ನು ಬೆಳೆಸಿದ್ದು ಸಹಕಾರ ಕ್ಷೇತ್ರ. ನಾವು ಬಂಡವಾಳಶಾಹಿ ಮಾರುಕಟ್ಟೆಯ ಸಿದ್ಧಾಂತಕ್ಕೆ ಶರಣಾಗಿ ಸಹಕಾರಿ ತತ್ವ ವಿಫಲವಾಗುತ್ತಿದೆ ಎನ್ನುವ ನಂಬಿಕೆಯತ್ತ ಜಾರುತ್ತಿರುವಾಗ ಅಲ್ಲಲ್ಲಿ ಸಹಕಾರ ಕ್ಷೇತ್ರದ ಹಣತೆಗಳು ಬೆಳಗುತ್ತ ಮಾರ್ಗದರ್ಶಕವಾಗುತ್ತಿವೆ. ಸಾರ್ವಜನಿಕರ ಕಣ್ಣುಗಳಲ್ಲಿ ದೊಡ್ಡದಾಗಿ ಕಾಣಿಸುವವರು ಮಾತ್ರ ನಿಜಕ್ಕೂ ಉಪಯುಕ್ತ ಜೀವನ ನಡೆಸುವಂತವರು ಎಂದು ಸಮಾಜ ಭಾವಿಸಿದರೂ, ಬಹುತೇಕ ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಗುತ್ತಿರುವುದು ಎಲೆಮರೆಕಾಯಿಗಳೇ. ಅಸಂಘಟಿತ ಕಾರ್ಮಿಕ ವರ್ಗವನ್ನ ಅದರಲ್ಲೂ ಅಲಕ್ಷಿತ ಮಹಿಳಾ ಕಾರ್ಮಿಕರನ್ನು ಒಗ್ಗೂಡಿಸಿ, ತೀರಾ ಕೆಳವರ್ಗದ ಕೂಲಿ ಕಾರ್ಮಿಕರ ಮಹಿಳೆಯರ ಬದುಕಿನಲ್ಲಿ ಆಶಾಕಿರಣವಾಗಿ, ಸ್ತ್ರೀ ಸಮೂಹ ಶಕ್ತಿಯ ರೂವಾರಿಯಾಗಿ 1972ರಲ್ಲಿ ಗುಜರಾತಿನಲ್ಲಿ ಇಳಾ ಭಟ್ ಇವರಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ "ಸ್ವ ಉದ್ಯೋಗಿ ಮಹಿಳಾ ಸಂಘಟನೆ – ಸೇವಾ". (SEWA – Self Employed Women's Association).

ತುತ್ತು ಅನ್ನಕ್ಕಾಗಿ ಶ್ರಮಪಡುತ್ತಿರುವ ಕಷ್ಟ ಜೀವಿಗಳಿಗೆ, ಅದರಲ್ಲಿಯೂ ದುಡಿದು ತಿನ್ನುವ ಸ್ವಾವಲಂಬಿ ಮಹಿಳೆಯರಿಗೆ ದಾರಿದೀಪವಾಗಿದ್ದು 'ಸೇವಾ'. ಇದರ ಸೇವಾ ವ್ಯಾಪ್ತಿ ವಿಶಾಲವಾದದ್ದು. ಬಡ ಹೆಣ್ಣು ಮಕ್ಕಳ ಆರೋಗ್ಯ ಕಾಳಜಿಯಿಂದ ಹಿಡಿದು ಅವರ ಸ್ವಾವಲಂಬಿತ ಬದುಕಿನವರೆಗೆ ಇದು ಗಮನಹರಿಸುತ್ತದೆ. ಸಮಾಜದಲ್ಲಿ ಅವರು ಆತ್ಮಗೌರವದಿಂದ ಬಾಳಲು ಅಗತ್ಯವಿರುವ ಅವಕಾಶವನ್ನು, ಉದ್ಯೋಗವನ್ನು, ಶಿಕ್ಷಣವನ್ನು ಇದು ಒದಗಿಸುತ್ತದೆ. ಸಹಕಾರಿ ತತ್ವಗಳನ್ನು ಆಧರಿಸಿದ ಸೇವಾದ ಮೂಲಕ 10 ಲಕ್ಷಕ್ಕೂ ಹೆಚ್ಚು ಮಹಿಳೆಯರು ಆರ್ಥಿಕ ರಂಗದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದಾರೆ. ಶೋಷಣಾ ವ್ಯವಸ್ಥೆಯಿಂದ ಮುಕ್ತಿ ಪಡೆದು ತಮ್ಮ ಹಕ್ಕುಗಳನ್ನು ಪಡೆದಿದ್ದಾರೆ. 'ಸೇವಾ'ದ ಕಾರ್ಯಕ್ಷಮತೆಗೆ ಮತ್ತು ಕಾರ್ಮಿಕ ಮಹಿಳೆಯರು ಸಾಧಿಸಿದ ಸಶಕ್ತೀಕರಣಕ್ಕೆ ಇಳಾ ಭಟ್ ಅವರ ಹಲವು ದಶಕಗಳ ಕಠಿಣ ಪರಿಶ್ರಮ, ತ್ಯಾಗ ಮತ್ತು ಸೇವಾ ಮನೋಭಾವದ ಹಿನ್ನಲೆಯಿದೆ. ಇಂತಹ ವಿಶಿಷ್ಟ ಸಂಸ್ಥೆಯ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 17 : http://www.sewa.org/**

- 'ಸೇವಾ' ಈ ಸಂಸ್ಥೆ ನಡೆದುಬಂದ ದಾರಿ, ಇದರ ಇತಿಹಾಸ, ಇಂದಿನ ಇದರ ಸ್ಥಿತಿಗತಿಯ ಪರಿಚಯ, ಪ್ರಶ್ನೆಗಳ ರೂಪದಲ್ಲಿ ಗುರಿಗಳನ್ನಿರಿಸಿಕೊಂಡು ಅದರ ಉತ್ತರಕ್ಕಾಗಿ ಶ್ರಮಿಸುತ್ತಿರುವ ಇದರ ಗುರಿಯ ಮಾಹಿತಿ, ಇದರ ಕಾರ್ಯನಿರ್ವಹಣಾ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- 'ಸೇವಾ' ಚಳುವಳಿ ಗುಜರಾತಿನ ಸಹಕಾರ ಕ್ಷೇತ್ರದಲ್ಲಿ ಉಂಟು ಮಾಡಿದ ಪರಿಣಾಮ, ಗುಜರಾತಿನ ಸಹಕಾರ ಕ್ಷೇತ್ರದ ಮಾಹಿತಿಗಳು, 'ಸೇವಾ'ದ ಮಾದರಿಯಲ್ಲಿ ರಚನೆಯಾದ ಸ್ವಯಂ ಸೇವಾ ಸಂಸ್ಥೆಗಳ ವಿವರಗಳು, ಗ್ರಾಮೀಣ ಉತ್ಪಾದಕರ ಸಂಗಗಳ ಮಾಹಿತಿ, ಸಾಮಾಜಿಕ ಭದ್ರತಾ ಸಂಸ್ಥೆಗಳ ಮಾಹಿತಿ, ಅಂತರ ರಾಷ್ಟ್ರೀಯ ಸಹಕಾರ ಕ್ಷೇತ್ರದೊಂದಿಗೆ 'ಸೇವಾ' ಗುರುತಿಸಿಕೊಂಡ ಬಗೆ ಹಾಗೂ ಅಂತರ ರಾಷ್ಟ್ರೀಯ ಸಹಕಾರ ಕ್ಷೇತ್ರಕ್ಕೆ 'ಸೇವಾ' ಸಂಸ್ಥೆಯ ಕೊಡುಗೆ ಇತ್ಯಾದಿ ಮಾಹಿತಿಗಳನ್ನು ಈ ತಾಣದಲ್ಲಿ ಪಡೆಯಬಹುದು.
- ಅಸಂಘಟಿತ ವಲಯಕ್ಕೆ ಆಶ್ರಯ ಕಲ್ಪಿಸಲು ಹುಟ್ಟಿದ ಸಂಸ್ಥೆ ಇಂದು 20ಕ್ಕೂ ಹೆಚ್ಚು ಸಹೋದರ ಸಂಸ್ಥೆಗಳನ್ನು ಸ್ಥಾಪಿಸಿ ಆಲದ ಮರವಾಗಿ ಬೆಳೆದ ಬಗೆಯನ್ನು ಈ ತಾಣದಲ್ಲಿ ನೋಡಬಹುದು. ಹಾಲು ಉತ್ಪಾದನಾ ಕ್ಷೇತ್ರ, ವಿಮಾ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ, ವ್ಯಾಪಾರ, ಸಂಶೋಧನೆ, ಹೌಸಿಂಗ್, ಸಂಸ್ಕಾರ, ಶಿಕ್ಷಣ, ಪ್ರವಾಸೋದ್ಯಮ ಮುಂತಾದ ಕ್ಷೇತ್ರಗಳಲ್ಲಿ 'ಸೇವಾ' ವ್ಯಾಪಿಸಿದ ಬಗೆಯ ಮಾಹಿತಿಗಳು ಈ ತಾಣದಿಂದ ಲಭ್ಯ.
- 'ಸೇವಾ' ಸಂಸ್ಥೆ ಒದಗಿಸುತ್ತಿರುವ ಸೇವೆಗಳ ವಿವರವಾದ ಮಾಹಿತಿ, ಇದರ ಪ್ರಕಟಣೆಗಳು, ಸಂಶೋಧನಾ ಪ್ರಬಂಧಗಳ ವಿವರಗಳನ್ನು, ದಾಖಲೆಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- 'ಸೇವಾ' ಸಂಸ್ಥೆಯ ವಾರ್ಷಿಕ ವರದಿಗಳು, ವಾರ್ತಾ ಪತ್ರಿಕೆಗಳು, ಸೇವಾ ಸಂಸ್ಥೆಗೆ ಸಂದ ಗೌರವ, ಪ್ರಶಸ್ತಿಗಳ ಮಾಹಿತಿಯನ್ನು ಇಲ್ಲಿ ನೋಡಬಹುದು.
- ಭಾರತದ ಮಹಿಳಾ ಕ್ಷೇತ್ರವನ್ನು ಆರ್ಥಿಕವಾಗಿ ಬಲಪಡಿಸಲು ಶ್ರಮಿಸುತ್ತಿರುವ 'ಸೇವಾ'ದ ಬೆಳವಣಿಗೆಯಲ್ಲಿ ಕಾರಣೀಕರ್ತರಾದ ಆಡಳಿತ ಮಂಡಳಿಯಾಗಲಿ ನಾಯಕತ್ವದ ವಿವರವಾಗಲಿ ಈ ತಾಣದಲ್ಲಿ ಲಭ್ಯವಿಲ್ಲ. ಸಾಮೂಹಿಕ ನಾಯಕತ್ವದಲ್ಲಿ, ಸಹಕಾರ ತತ್ವಗಳ ಬೆಳಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 'ಸೇವಾ'ದ ಉದ್ದೇಶ ವ್ಯಕ್ತಿಗತ ಗುರುತಿಸುವಿಕೆಗಿಂತ ದೊಡ್ಡದು.

ಬಡವರಿಗೆ, ರೈತರಿಗೆ, ಸಹಕಾರ ಸಂಸ್ಥೆಗಳಿಗೆ ಮಾರುಕಟ್ಟೆಯ ಸೂತ್ರಗಳು, ವಾಣಿಜ್ಯ ಪರಿಣಿತಿಗಳು ಬೇಕು ಎನ್ನುವ ಇಂದಿನ ದಿನಮಾನದಲ್ಲಿ, ಈ ಸೂತ್ರಗಳ ಚೌಕಟ್ಟು ತುಸು ಭಿನ್ನವಾದರೆ, ಬಂಡವಾಳಶಾಹಿ ಪದ್ಧತಿಯ ಮೂಲ ತುಸುವೇ ಬದಲಾದರೆ ಏನೆಲ್ಲ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳು ಸಾಧ್ಯವಾಗಬಹುದು ಎನ್ನುವುದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ "ಸೇವಾ". ಸಾಮಾಜಿಕ ಅಗತ್ಯಗಳ, ಮೂಲಭೂತ ಅವಶ್ಯಕತೆಗಳ ಅನಿವಾರ್ಯತೆಗಳನ್ನು ಮನಗಂಡು ಸಾಮೂಹಿಕ ನೇತೃತ್ವದಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಿದಾಗ ಸರ್ಕಾರವಾಗಲಿ, ಬಂಡವಾಳಶಾಹಿ ಪದ್ಧತಿಯಾಗಲಿ ಸಾಧಿಸಲಾಗದ್ದನ್ನು ಸಾಧಿಸಲು ಸಾಧ್ಯ ಎನ್ನುವುದನ್ನು ಸಹಕಾರ ಕ್ಷೇತ್ರ ಅರಿಯಬೇಕಿದೆ. ಈ ನಿಟ್ಟಿನಲ್ಲಿ 'ಸೇವಾ'ದಂತಹ ಸಂಸ್ಥೆಗಳು ಸಹಕಾರ ಕ್ಷೇತ್ರದ ಭವಿಷ್ಯದ ಸಾಧನೆಗಳಿಗೆ ದಾರಿದೀಪವಾಗಲಿ. ■

ಅಧ್ಯಯನ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20



# ಕರ್ನಾಟಕದ ಎರಡು ಸಾವಿರ ವರ್ಷಕ್ಕೂ ಹೆಚ್ಚಿನ ಇತಿಹಾಸದಲ್ಲಿ ಹಲವು ರಾಜವಂಶಗಳು ಮಹಾ ಸಾಮ್ರಾಜ್ಯಗಳನ್ನು ಕಟ್ಟಿ ಈ ನಾಡನ್ನು ಆಳಿ ಇಲ್ಲಿಯ ಭಾಷೆ, ಕಲೆ, ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗಿದ್ದಾರೆ

ಕರ್ನಾಟಕ ಮೂಲದ ಸಾಮ್ರಾಜ್ಯಗಳ ಪ್ರಭಾವ ಭಾರತದ ಎಲ್ಲ ಭಾಗಗಳಲ್ಲೂ ಕಂಡುಬರುತದೆ. ಬಂಗಾಳದ ಸೇನ ರಾಜವಂಶ ತಮ್ಮನ್ನು ಕರ್ನಾಟ ಕ್ಷತ್ರಿಯ ಗಳೆಂದು ಕರೆದುಕೊಳ್ಳುತಿದ್ದರು, ಮಿಥಿಲಯಾ ಕರ್ನಾಟಕರು ಇಂದಿನ ಬಿಹಾರದಮೇಲೆ ರಾಜ್ಯ ಅಳುತಿದ್ದರು ಅವರು ಕೂಡ ತಮ್ಮನು ತಾವು ಕರ್ನಾಟ ವಂಶ ಹಾಗು ಕರ್ನಾಟಕ ಕ್ಷತ್ರಿಯರೆಂದು ಕರೆದುಕೊಳ್ಳುತಿದ್ದರು. ಮದ್ಯ ಭಾರತದ ಚಿಂದಕ ನಾಗರು, ಕಳಿಂಗದ ಗಂಗರು (ಒರಿಸ್ಸಾ), ಮಾನ್ಯಖೇಟದ ರಾಷ್ಟ್ರಕೂಟರು, ವೆಂಗಿ ಚಾಲುಕ್ಯರು, ದೇವಗಿರಿಯ ಯಾದವ ವಂಶ ಇವರೆಲ್ಲರೂ ಕನ್ನಡ ಮೂಲದವರೇ ಆದರೂ ಕ್ರಮೇಣ ಪ್ರಾದೇಶಿಕ ಭಾಷೆಗಳನ್ನು ಪ್ರೋತ್ಸಾಹಿಸಿದರು.

**ಇತಿಹಾಸ ಪೂರ್ವ ಅಧ್ಯಯನ :** ಕರ್ನಾಟಕದ ಇತಿಹಾಸ ಪೂರ್ವದ ವಿಸ್ತಾರವಾದ ಅಧ್ಯಯನ ಮಾಡಿದ ಹೆಗ್ಗಳಿಕೆ ರೋಬೇರ್ತ್ ಬ್ರೂಸ್–ಫೂಟೇ ಅವರದು, ಇವರ ಈ ಕಾರ್ಯವನ್ನು ನಂತರ ಬೇರೆ ವಿದ್ವಾಂಸರು ಮುಂದುವರಿಸಿದರು.

ಆಧುನಿಕ ಕರ್ನಾಟಕದಲ್ಲಿ ನವಶಿಲಾಯುಗ ವಸತಿಯಿದ್ದ ಹಾಗು ಕ್ರಿ.ಪೂ 2ನೆಯ ಶತಮಾನದ ಪ್ರಾಚೀನ ಕಾಲದ ಕಲ್ಲಿನ ಅಥವಾ ಲೋಹದ ಆಯುಧಗಳನ್ನೂ ಮೊದಲಿಗೆ 1872ರಲ್ಲಿ ಶೋಧಿಸಲಾಯಿತು. ವರದಿಗಳ ಪ್ರಕಾರ ಕಲ್ಲು ಕೊಡಲಿಯನ್ನು ರೈಚುರು ಜಿಲ್ಲೆಯಾ ಲಿಂಗ್ಸುಗುರ್ನಲ್ಲಿ ಸಿಕಿವೆ; ಆದರೆ ಇ ವರದಿಯನ್ನು ಕಚಿತ ಪಡಿಸಲು ಇನ್ನು ಆಗಿಲ. ಬೃಹತ್ ಶಿಲೆಯ ರಚನೆಗಳು ಹಾಗು ಸಮಾದಿಗಳನ್ನೂ 1862ರಲ್ಲಿ ಕೊಡಗು ಹಾಗು ಮೂರೆಯ್ ಬೆಟ್ಟದಲ್ಲಿ ಶೋದಿಸಲಾಗಿದೆ, ಆಗೆಯೇನವಶಿಲಾಯುಗದ ತಾಣಗಳು ಉತ್ತರ ಕರ್ನಾಟಕದಲ್ಲಿ ಸಿಕ್ಕಿವೆ.

## ನಾಡಗೀತೆ

ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೇ, ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ, ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂಧನರವತರಿಸಿದ ಭಾರತ ಜನನಿಯ ತನುಜಾತೆ !

ಜನನಿಯ ಜೋಗುಳ ವೇದದ ಘೋಷ, ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೇ, ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ, ಭಾರತ ಜನನಿಯ ತನುಜಾತೆ !

ಶಂಕರ ರಾಮಾನುಜ ವಿದ್ಯಾರಣ್ಯ, ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ, ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸನ ಮಂಗಳ ಧಾಮ, ಕವಿ ಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾನಂದ ಕಬೀರರ ಭಾರತ ಜನನಿಯ ತನುಜಾತೆ !

ತೈಲಪ ಹೊಯ್ಸಳರಾಳಿದ ನಾಡೇ, ಡಂಕಣ ಜಕಣರ ನಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗ, ಕಾವೇರಿಯ ವರ ರಂಗ
ಚೈತನ್ಯ ಪರಮಹಂಸ ವಿವೇಕರ, ಭಾರತ ಜನನಿಯ ತನುಜಾತೆ !

ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ, ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ, ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ

**– ಕುವೆಂಪು**

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | |
|---|---|
| 1. ಶ್ರೀ ಗುರುನಾಥ ಜ್ಯಾಂತಿಕರ್, ಅಧ್ಯಕ್ಷರು | 8886644701 |
| 2. ಶ್ರೀ ಹೆಚ್.ವಿ. ರಾಜೀವ್, ಉಪಾಧ್ಯಕ್ಷರು | 8886644702 |
| 3. ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು | 8886644703 |
| 4. ಉಪ ಪ್ರಧಾನ ವ್ಯವಸ್ಥಾಪಕರು | 8886644704 |
| 5. ಉಪ ಪ್ರಧಾನ ವ್ಯವಸ್ಥಾಪಕರು | 8886644705 |
| 6. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಕಾಂತ್ ಬರುವೆ) | 8886644706 |
| 7. ಸಹ ಪ್ರಧಾನ ವ್ಯವಸ್ಥಾಪಕರು (ಬೆಂಗಳೂರು ವಿಭಾಗಾಧಿಕಾರಿ) (ರಘುನಂದನ್ ಕೆ.) | 8886644707 |
| 8. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಮತಿ ಕೃತಿ ಜರ್ನಾಧನ್) | 8886644708 |
| 9. ಸಹ ಪ್ರಧಾನ ವ್ಯವಸ್ಥಾಪಕರು (ಶ್ರೀಮತಿ ಶೋಭ ಆರ್.) | 8886644709 |
| 10. ತರಬೇತಿ ಅಧಿಕಾರಿ (ವಿ.ಜೆ. ಕಾರಕೂನ) | 8886644710 |
| 11. ಬೆಳಗಾವಿ ವಿಭಾಗಾಧಿಕಾರಿ | 8886644711 |
| 12. ಗುಲ್ಬರ್ಗಾ ವಿಭಾಗಾಧಿಕಾರಿ | 8886644714 |
| 13. ಮೈಸೂರು ವಿಭಾಗಾಧಿಕಾರಿ | 8886644712 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್
ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**

ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜಿವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010